# ಶಾಸನಗಳಲ್ಲಿ ಜೈನತೀರ್ಥಗಳು

ತೀರ್ಥ ಎಂಬ ಶಬ್ದಕ್ಕೆ ೨೦ಕ್ಕೊ ಹೆಚ್ಚು ಅರ್ಥಗಳಿವೆ. ಇದು ಸಂಸ್ಕೃತ ಶಬ್ದ. ಈ ಶಬ್ದದ ಅರ್ಥವ್ಯಾಪ್ತಿಯನ್ನು ಕುರಿತು ಚರ್ಚಿಸುವಾಗ ಮುಖ್ಯವಾಗಿ ಪುಣ್ಯಸ್ಥಳ. ಪವಿತ್ರವಾದ ಕ್ಷೇತ್ರ ಎಂಬ ಅಂಶಕ್ಕೆ ಹೆಚ್ಚು ಒತ್ತು ಕೊಡಲಾಗಿದೆ. ಎಲ್ಲ. ಧರ್ಮಗಳಲೂ ತೀರ್ಥಕ್ಷೇತ್ರ ,ತೀರ್ಥದರ್ಶನ ಎಂಬ ಮಾತುಗಳು ಬಲೆಕೆಯಲ್ಲುವೆ. ತೀರ್ಥಗಳೆ ತೀರ್ಥಕ್ಷೇಗಳು, ತೀರ್ಥ ಕ್ಷೇತ್ರಗಳಿಗೆ ಕೈಗೊಳ್ಳುವ ಯಾತ್ರೆ ತೀರ್ಥಯಾತ್ರೆ. ಭಾರತೀಯರಲ್ಲಿ ಸಾವಿರಾರು ವರ್ಷಗಳಿಂದ ತೀರ್ಥ ಯಾತ್ರೆಯು ಒಂದು ಧಾರ್ಮಿಕ ಸಂಪ್ರದಾಯವಾಗಿ ಬೆಲೆದು ಬಂದಿದೆ.

ಆೈನ ಪರಂಪೆರೆಯಲ್ಲಿಯೂ , ಸುಮಾರು ಎರಡು ಸಾವಿರ ವರ್ಷಗಳಿಂದ, ತೀರ್ಥಯಾತ್ರೆ, ತೀರ್ಥಕ್ಷೇತ್ರ ದರ್ಶನ ವಡಿಕೆಯಲ್ಲಿದೆ. ಜೈನ ಪರಿಭಾಷೆಯಲ್ಲಿ ತೀರ್ಥಂಕರ ಶಬ್ದ ಮಹತೆಅದ್ದು. ತೀರ್ಥವೆಂದರೆ ಮಾರ್ಗ, ಜೈನಪಥ. ಮುನಿಮಾರ್ಗ. ತೀರ್ಥವನ್ನು. ಮಾರ್ಗವನ್ನು ,ಸಂಸಾರವನ್ನು ದಾಟುವ ದಾರಿಯನ್ನು ತೋರಿದರು ತೀರ್ಥಂಕರರು. ಸನ್ಯಾಸಿ, ಸನ್ಯಾಸಿನಿ ,ಶ್ರಾವಕ (ಗೃಹಸ್ಥ ), ಶ್ರಾವಕಿ (ಗೃಹಿಣ) ಎಂಬ ಚತುರ್ವಿಧ ತೀರ್ಥಾಸ್ಥಾಪಕರು ತೀರ್ಥಂಕರರು. ತೀರ್ಥಂಕರರ ಬಿಂಬ–ಮೂರ್ತಿಗಳು ಇರುವ ಜಿನಮಂದಿರಗಳನೂ ತೀರ್ತಾವೆಂದು ಕರೆಯಲಾಗಿದೆ. ಫೇವಪೂಜೆ. ಗುರೂಪಾಸ್ತಿ, ಸ್ವಾಧ್ಯಾಯ ,ಸಯಮ ,ತಪ ಮತ್ತು ದಾನ– ಈ ಆರು ಮುಖ್ಯ. ಕರ್ತ್ಯವ್ಯಗಳನ್ನು ಜೈನ ಶ್ರಾವಕರು ಫ್ರತಿನಿತ್ಯ ಆಚರಿಸಬೇಕು.

ತೀರ್ಥಂಕರುರ ಮೋಕ್ಷಪಡೆದ ನೆಲ. ಮೋಕ್ಷಭೂಮಿ ,ನಿರ್ಮಾಣ ಹೊಂದಿದ ಸ್ಥಳ ನಿರ್ವಾಣ ಭೂಮಿ. ʼವರ್ತಮಾನಕಾಲದ ೨೪ ತೀರ್ತಂಕರರಲ್ಲಿ ಆದಿನಾಥರು ಅಷ್ಟಾಪದ (ಕೈಲಾಸಪರ್ವತ –ಹಿಮಾಲಯ) ದಲ್ಲಿಯೂ, ನೇಮಿನಾರ್ಥರು. ಊರ್ಕಯಂತ ಗಿರಿ. ಗಿರಿನಾರ್್ರ (ಚಂಪಾಪುರಿ–ಬಿಹಾರ್) ,ಮಹಾವೀರರು ಪಾವಾಪುರಿಯಲೂ ನಿರ್ವಾಣ ಹೊಂದಿದರು. ಇನ್ನುಳಿದ ೨೦ ಜನ ತೀರ್ಥಂಕರರು ಸಮ್ಮೇದ ಶಿಖರದಲ್ಲಿ (ಪಾರಸನ್ಮಾಥ ಪವರ್ತ –ಬಿಹಾರ )ನಿರ್ವಾಣ ಪಡೆದರು, ಅದರಿಂದ ಸಮ್ಮಗಿರಿ ಯನ್ನು ತೀರ್ಥರಾಜ ಎಂದು ಗೌರವಿಸಲಾಗಿದೆ: ಆಚಾರ್ಯ ಕುಂದುಕುಂದರು. (ಕ್ರಿ. ್ʼ ೧–೨ ನೆಯಶತಮಾನ) ಫ್ರಾಕೃತದಲ್ಲಿಯೂ ,ಆಚಾರ್ಯಪೊಜ್ಯಪಾದರು.(ಕ್ರಿ.ಶ. ೬ನೆಯ ಶ )ಸಂಸ್ಕೃತದಲೂ ರಚಿಸಿರುವ ‘ನಿರ್ವಾಣಭಕ್ತಿ’ ಯಲ್ಲಿ ಮಾಡಿರುವ ಫ್ರಸ್ತುತ ವಿಷಯದ ವರ್ಣನೆ..

ಅಟಾವಯಮ್ಮಿ ಉಸಹೋ ಚಂಪಾಏವಾಸುಪುಜ್ಜ ಜಿಣಣಾಹೊ
ಉಜ್ಜಂತೇ ಣೇಮಿಜಿಣೋ ಪಾವಏ ಣಿವ್ವುದೋ ಮಹಾವೀರೋ ॥
ವೀಸಂತು ಜಿಣವರಿಂದಾ ಅಮರಾಸಾರು ವಂದಿದಾ ಧುದ ಕಿಲೇಸಾ
ಸಮ್ಮೇದೇ ಗಿರಿಸಿಹರೇ ಣಿವ್ವಾಣಗಯಾ ಣಮೋ ತೇಸಿಂ
ಅಷ್ಟಾಪಧೇ ವೃಷಭಶ್ಚಂಪಾಯಾಂ ವಾಸುಪೂಜ್ಯ ಜಿನನಾಥ;
ಊರ್ಜಯಂತೇ ನೇಮಿಜಿನ ;ಪಾವಾಯಾಂ ನಿರ್ವೃತೋ ಮಹಾವೀರ ;॥
ವಿಂಶತಿಸ್ತು ಜಿನೆವರೇಂದ್ರಾ ಅಮರಾಸುರ ವಂದಿತಾ ಧುತಕೇಶಾ:
ಸಮ್ಮೇದೇ ಗಿರಿಶಿಖರೇ ನಿರ್ವಾಣಗತಾ ನಮಸ್ತೇಭ್ಯ; ॥

ತೀರ್ಥಂಕರರಲ್ಲದ ಇತರ ಅಸಂಖ್ಯಾತ ಅರ್ಹತರು ಮೋಖಗಾಮಿಗಳಾದ ನೆಲವನ್ನು ತೀರ್ಥಕ್ಷೇವೆಂದು ಪರಿಗಣಸಿದ್ದರೆ. ರಾನಾತಜಾಸ್ತಾನದಲ್ಲಿರುವ ಅಬು (ಅರ್ಬುದ )ಬೆಟ್ಟ. ಗುಜರಾತಿನಲ್ಲಿರುವ ಶತ್ರುಂಜಯ ಪರ್ವತ ಮೊದಲ್ಲಾದುವು; ಕೊಂಡಕುಂದೆ, ಕೊಪ್ಪಳ,

ಬಂದಳಿಕೆ (ಬಂದಣಗೆ) ಮುಕ್ಕುಂದ,ಶ್ರವಣ ಬೆಳುಗೊಳ, ಶ್ರೀಪರ್ವತ ಹೊಂಬುಜ- ಮೊದಲಾದುವನ್ನು ಅತಿಶಯ ಜೈನತೀರ್ಥಕ್ಷೇತ್ರಗಳೆಂದು ಮನ್ನಿಸಲಾಗಿದೆ. ಅತಿಶಯ ಕ್ಷೇತ್ರಗಳೆಂದರೆ ಮಹಾಮುನಿಗಳ ಬದುಇಣನಲ್ಲಿ ಅತಿಶಯ ಘಟನೆಗಳು, ಪಾವಾಡಗಳು. ನಡೆದ ಎಡೆಗಳು. ಶ್ರುತಕೇವಲಿ ಭದ್ರಬಾಹು ಮುನಿಯ ಸಲ್ಲೇಖನ ವ್ರತದಾರಣೆಯಿಂದ ಮುಡಿಪಿದ ಜಾಗವಾಗಿ ಅತಿಶಯ ಕ್ಷೇತ್ರವಾಗಿದ್ದ ಶ್ರವಣಬೆಳಗೊಳವು ಬಾಗುಬಲಿ (ಗೊಮ್ಮಟ) ಮೂರ್ತಿಯಿಂದಾಗಿ ಜಗಬ್ದವ್ಯ ಮತ್ತತಿಶಯತೆಯಿದ ಕೀತಿಯ ತುತ್ತ ತುದಿಗೇರಿತು. ವಿಜಾಪುರದ ಸಹಸ್ರ ಫಣ ಪಾರ್ಶ್ವನಾಥ ಕ್ಷೇತ್ರವನ್ನು ಸಹ ಒಂದು ಅತಿಶಯ ಕ್ಷೇತ್ರವೆಂದು ಕರೆಯಲಾಗಿದೆ. ಹೊಂಬುಜವಂತೂ ಜಿನಶಾಸನದೇವಿ ಪದ್ಮಾವತೀಯಕ್ಷಿಯು ಇಯುವ ದೊಡ್ಡ ಅತಿಶಯ ಕ್ಷೇತ್ರವಾಗಿದೆ.

ಹೀಗೆ ನೀವಾಣ ಭೂಮಿ,ತೀರ್ಥಕ್ಷೇತ್ರ. ಅತಿಶಯ ಕ್ಷೇತ್ರ- ಎಲ್ಲವೂ ತೀರ್ಥಗಲಾಗಿ, ಯಾತ್ರಾಸ್ಥಳಗಳಾಗಿ, ಪುಣ್ಯಸ್ಥಳಗಳಾಗಿ, ಪುಣ್ಯಸ್ಥಳಗಳಾಗಿ ಪರಿಣಮಿಸಿವೆ. ಫ್ರಸಿದ್ದವಾದ, ಐತಿಹಾಸಿಕ ಮಹತ್ವದ ಐದು 'ಪಂಚತೀರ್ಥ' ಗಳಲ್ಲದೆ. (ಕೈಲಾಸ. ಚಂಪಾ, ಗಿರಿನಾರ್, ಪಾವಾ, ಸಮ್ಮೇದಶಿಖರ). ಇವುಗಳಿಗೆ ಸಮೀಪವಾಗಿ ಇರುವ ಸಣ್ಣ ಹಾಗೂ ಸ್ಥಳೀಯ'ಪಂಚತೀರ್ಥೀ'ಗಳೂ ಇವೆ. ಉತ್ತರ ಗುಜರಾತಿನ ಪಂಚತೀರ್ಥಿಗಳೆಂದರೆ ಚರುಪ್ಪ, ಮೇತ್ರನ ,ಭಿಲ್ದಿ ,ಕಂಬೊಇ, ತರಂಗ, ಸೀಮಂದರಸ್ವಾಮಿ (ಮೆಹ್ಸೆನದಲ್ಲಿದೆ).ವಲಂ ಚನಸ್ಮ , ಗಭು, ಬೇೂಯನಿ, ಪನ್ಸರ್. ರಂಕೇಶ್ವರದ ಪ್ಂಚತಿರ್ಥಿಗಳೆಂದರೆ ರಥನಪುರ,ಸಮಿ, ಮುಜ್ಪುರ ,ವಡಗಾಂ, ಉಪರಿಯಲ. ಇದೇ. ರೀತಿ ಸೌರಾಷ್ಟ್ರ, ಮಾರ್ವರ್, ಕುರುವಾ, ಅಹ್ಮದಾಬಾದು, ಕಚ್ಛ್- ಭದ್ರೇಶ್ವರ,ಶತ್ರುಂಜಯ, ಬರೋಡ, ಗಿರಿನಾರ್- ಇವುಗಳಿಗೆ ಸೇರಿದ 'ಪಂಚತೀರ್ಥಿ'ಗಳೂೂ ಇವೆ, ಈ ಸಣ್ಣಪುಟ್ಟ ತೀರ್ಥಿಗಳಿಗೆ 'ಪಂಚತೀರ್ಥಿಗಳಿಗೆ

‘ಪಂಚತೀರ್ಥ’ ಎಂದು ಗೆಸರು ಇದ್ದರೂ ,ಸಂಖ್ಯೆಯಲ್ಲಿ ಐದೇ ಇರಬೇಕೆಂಬ ಕಟ್ಟುನಿಟ್ಟಿಲ್ಲ ಹೆಚ್ಚೊ ಇರಬಹುದು , ಇವೆ. .

ತೀರ್ಥ್‌ವಂದನೆ, ತೀರ್ಥ್‌ಪೂಜೆ, ತೀರ್ಥಯಾತ್ರೆ ಇವು ಬಾಹ್ಯಾಚರಣೇಗಳು, ‘ದ್ರವ್ಯಪೂಜೆ’ಗೆ ಸೇರಿವೆ, ‘ಬಾಹ್ಯತಪ’ಕ್ಕೆ ಸಂಬಂಧಿಸಿವೆ. ಆದರೆ ಜೈನಚಾರ್ಯರು ಬಾಹ್ಯಪೂಜೆಗಿಂತಲೂ ಹೆಚಿವಿನ ಒತ್ತು ಮತ್ತು ಮಃವತವನ್ನು ಕೊಟ್ಟು ಸ್ವದ್ಧಾಂತಿಕವಾಗಿ ಪ್ರತಿಪಾದಿಸಿರುವುದು‘ಭಾವಾಪೂಜೆ’ ಯನ್ನು .ದ್ರವ್ಯಪೂಜೆಯಿಂದ ಮಾಡುವ ದೇವಪೂಜೆಯು ಧರ್ಮ ಪ್ರಭಾವನೆಯನ್ನು ಇಮ್ಮಡಿಸುತ್ತದೆ. ಮತ್ತು ಶ್ರಾವಕ ವರ್ಗವನ್ನು ಲೈಕಿಕದಿಂದ ಪಾರಮಾರ್ಥಿಕದತ್ತ ಹೊರಳಿಸುತ್ತದೆ.

ಅದರಿಂದ ವರ್ಷದ ಎಲ ಕಾಲದಲ್ಲೂ ತೀರ್ಥಸಂದರ್ಶನ ನಡೆದಿರುತದೆ ವಿಶೇಷ ಪೂಜೆ ಉತ್ಸವಾದಿ ಹಬ್ಬಗಳು ಇರದ ದಿನಗಳಲೂ ತೀರ್ಥಯಾತ್ರೆ ಕೃಗೊಳ್ಳುವುದುಂಟು. ಜೈನದರ್ಮ ಮಾನ್ಯ. ಮಾಡಿದ ಪವಿತ್ರ ಹಾಗೂ ಪುಣ್ಯತೀರ್ಥ ಕ್ಷೇತ್ರಗಳಿಗೆ ಹತ್ತಾರು ಬಾರಿ ಯಾತ್ರೆ ಮಾಡುವುದು ಸರ್ವೆ ಸಾಮಾನ್ಯ. ಬಾಳಿನಲ್ಲಿ ಒಮೆಯಾದರೂ ಈ ನೀವಾಣ ಭೂಮಿಗಳಿಗೆ, ಅತಿಶಯ ಕ್ಷೇತ್ರಗಳಿಗೆ ತೀರ್ಥಯಾತ್ರೆ ಕಡ್ಡಾಯ. ಪ್ರಾಚೀನ ಮತ್ತು ಮದ್ಯಲೀನ ಸಾಹಿತ್ಯದಲ್ಲಿ ಈ ತೀರ್ಥಸ್ಥಳಗಳ ಸಂಕ್ಷಿಪ್ತ ಹಾಗೂ ವಿಸಾರವಾದ ನಾನಾ ವರ್ಣನೆಗೆಳಿವೆ, ಹಾಗೆಯೇನೆ ತೀರ್ಥಯಾತ್ರೆಯ ಸ್ವರೂಪ ಫಲಗಳನ್ನು ,ಮಹಿಮೆಗಳನ್ನು ಸಹ ವಿವರಿಸಲಾಗಿದೆ. ಕುಟುಂಬದ ಬಬ್ಬನೇ ವ್ಯಕ್ತಿ, ಇಡೀ ಕುಂಟುಂಬದವರು, ನೆರೆಹೊರೆಯವರು. ಒಂದು ಹುಂಪು–ಹೀಗೆ ಹೇಹೆ ಬೇಕಾದರೂ, ಯಾರು ಬೇಕಾದರೂ ಒಂಪಿಯಾಗಿಯೊ ಒಟ್ಟಾಗಿಯೊ ತೀರ್ಥ(ಕ್ಷೇತ್ರ) ದರ್ಶನಕ್ಕೆ ಹೋಗಬುಹುದು.ತೀರ್ಥವಂದನಾ ಯಾತ್ರೆ, ಐದು ದಿನಕ್ಕೊ ಮೀರಿದ ಧೀರ್ಘಕಾಲಿಕ ಉತ್ತರ ಭಾರತದ –ದಕ್ಷಿಣಭಾರತದ ತೀರ್ಥಯಾತ್ರೆ. ಬಹಳ ಕಾಲದಿಂದ

ರೂಢಿಯಲ್ಲಿದೆ.ಜಿನಮುನಿಗಳು ಒಂದು ಸ್ಥಳದಲ್ಲಿ. ವರ್ಷಕಾಲ(ಚತುರ್ಮಾಸ – ಚೋಮಾಸು–ಮಳೆಗಾಲ)ಹೊರೆತು ಪಡಿಸಿ.ಹೆಚ್ಚು ಕಾಲ ನಿಲ್ಲುವ ನಿಯಮಗಳಿಲ್ಲ.ಗ್ರಾಮೇ ಏಕರಾತ್ರ, ನಗರೇ ಪಂಚರಾತ್ರಂ, ಅಟವ್ಯಾಂ ದಶರಾತ್ರಂ ಅಂಬೀ ಫ್ರಾಕರ, ಯತಿಧರ್ಮ ಫ್ರಣೀತ ನೀತಿಗೆ ಅನುಗುಣವಾಗಿ ಸಂಚಾರದಲ್ಲಿ ಇರುವರು. ಈ ಕಾರಣದಿಂದ ನಿರ್ಗ್ರಂಥ ಸವಣರಿಗೆ ಫ್ರೆತ್ಯೇಕ ತೀರ್ಥಯಾತ್ರೆಯ ಅಗತ್ಯ ಬೀಳುವುದಿಲ್ಲ. ಅಲ್ಲದೆ ಜೈನ ಮುನಿಗಳು ಮತ್ತು ಆರ್ಯಿಕೆಯರನ್ನು ಜಂಗಮ ತೀರ್ಥಗಳೆಂದು ತಿಳಿಯಲಾಗಿದೆ. ಸ್ಥಾನಿಕವಾಸಿಗಳಲೂ ತೇರಾಪಂಥಿಗಲೂ ಜೈನಚಾರ್ಯರು ಇರುವಲ್ಲಿಗೆ ಹೋಗಿ ಬರುವುದೇ ತೀರ್ಥಯಾತ್ರೆ. ಜಿನೋಪದಿಷ್ಟ ಉಪದೇಶವಾಣ ಇರುವ ಆಗಮಗಳೆ ಭಾವತೀರ್ಥಗಳು, ಅವನ್ನು ಪಠಸಿ ಪಾರಾಯಣ ಮಾಡುವುದೇ ಭಾವಪೂಜೆ. ತೀರ್ಥಕ್ಷೇತ್ರಗಳು ದ್ರವ್ಯ ತೀರ್ಥಗಳು. ಸ್ಥಾವರ ತೀರ್ಥಗಳು, ಇವುಗಳಿಗೆ ಮಾಡುವ ಪೂಜೆ ದ್ರವ್ಯ ಪೂಜೆ .

ತೀರ್ಥಕ್ಷೇತ್ರಗಳ ದರ್ಶನಾರ್ಥಿಯು ಕೆಲವು ನಿಯಮಗಳಿಗೆ ಬದ್ದನಾಗಿ ಯಾತ್ರೆಯ ಅವಧಿಯಲ್ಲಿ ನಡೆದುಕೊಳ್ಳ ಬೇಕು.

೧. ಒಪ್ಪೊತ್ತು ಹಗಲು ಆಹಾರ, ದಿನದಲ್ಲಿಒಂದೇ ಊಟ

೨. ಿಲದ ಮೇಲೆ ಮಲಗುವುದು

೩. (ಬರಿ) ಲಾಲಲ್ಲಿ ನಡಯುವುದು

೪. (ಜೈನ ) ಧರ್ಮದಲ್ಲಿ ಶ್ರದ್ದೆ ಇರುವುದು ( ಸಮ್ಯಕ್ತ್ವ)

೫. ಸಜಿವ ಹಸಿಯ ತರಕಾರಿ ತೆಗೆದು ಕೊಳ್ಳ ದಿರುವುದು

೬. ಬ್ರಹ್ಮ ಚರ್ಯವನ್ನು ಪಾಲಿಸುವುದು

ಇದರ ಜತೆಗೆ ತೀರ್ಥಯಾತ್ರಿಯು ಇನ್ನಾರು ಕತರ್ವ್ಯಗಳನ್ನು ಸಹ ಪಾಲಿಸಬೇಕು: ೧, ದಾನ ೨. ತಪ ,೩ ಉಷತ ವೇಷಭೂಷಣ, ೪. ಭಕ್ತಿಗೀತ ಅಂದರೆ ವಾದ್ಯ

ನುಡಿಸುವುದು– ವಾಚಿಸುದು (ಗೀತ–ವಾಜಿಂತ್ರ), ೫ ಸ್ತುತಿ–ಸ್ತೋತ್ರ (ಹಾಡುವುದು) ೬. ಪ್ರೇಕ್ಷಣ –ಬಸದಿಗಳಲ್ಲಿ ಭಕ್ತಿ ಸಮರ್ಪಣ ಇವುಗಳಿಗೆ ಅತಿಚಾರಗಳ ಚೌಕಟ್ಟನ್ನು ಕೂಡ ಹೇಳಲಾಗಿದೆ.

ತೀರ್ಥಗಳಿಗೆ ಹೋಗಿ ಬರಲು ಅಪೇಕ್ಷಯಿದ್ದರೂ ಆರ್ಥಿಕವಾಗಿ ಅನನಿಕೂಲ ಇರುವವರಿಗೆ ಸಹಾಯ ಸಾಧ್ಯತೆಗಳ ಒಂದು ಪರ್ಯಾಯ ನ್ಯನಸೆಯಿದೆ. ಹೀಗೆ ಧರ್ಮ ಪ್ರಭಾವನೆಯನ್ನು ಮಾಡಿದವರಿಗೆ 'ಸಂಘಪತಿ' ಎಂಬ ಪ್ರಶಸ್ತಿಯಿತ್ತು ಸಂಮಾನಿಸುವರು; ಸಂಘಪತಿಯ ಕುಟುಂಬದವರಿಗೆ 'ಸಂಘ್ವಿ' ಎಂಬ ಅಡ್ಡ ಹೆಸರಾಗುವುದು . ಇಂಥಿ ದಾನಿಗಳು ತೀರ್ಥಗಳಲ್ಲಿ ಮೂರ್ತಿಪ್ರತಿಷಾಪನೆ, ಜಿನಬಿಂಬದಾನ ಮಾಡುವುದು ೦ಟು. ಜೈನ ತೀರ್ಥಕ್ಷೇಗಳಲ್ಲಿ ಜಿನಬಿಂಬ–ಮೂರ್ತಿಗಳು ವಿಪುಲವಾದ ಸಂಖ್ಯೆಯಲ್ಲಿ ಸಿಗಲು ಈ ಧಾರ್ಮಿಕ ಆಶಮದಾಬಾದಿನಿಂದ ಶತ್ರುಂಜಯ ಪರ್ವತಕ್ಕೆ ಉಚಿತ ತೀರ್ಥಯಾತ್ರೆ ಮಾಡಿಸಿದನು. ಆತೀರ್ಥಯಾತ್ರಾ ತಂಡದಲ್ಲಿ ೪೦೦ ಮುನಿಗಳು, ೭೦೦ ಆರ್ಯಿಕೆಯರು. ೧೫,೦೦೦ ಶ್ರಾವಕರು ,೧೩೦೦ ಎತ್ತಿನ ಗಾಡಿಗಳು , ೨೦೦ ಕಾವಲುಗಾರರು, ೧೦೦ ಸ್ವಯಂಸೇವಕರು ಇದ್ದರೆಂದ ಮೇಲೆ ಅದರ ಅಗಾದತೆ ಎಷ್ಟೆಂಬುದನ್ನು ಊಹಿಸಿಕೊಳ್ಳಬಹುದು .ಸಮಣ ಸಮುದಾಯ ಮತ್ತು ಶ್ರಾವಕವರ್ಗ ಸೇರಿ ಹೀಗೆ ಒಟ್ಟಿಗೆ ತೀರ್ಥವದನೆಗೆ ತೊಡಗುವುದು ಸಾಮುದಾಯಕ ಶೋಭೆಗೂ ವ್ಯಾಪಕ ಧರ್ಮಪ್ರಭಾವನೆಗೂ ಕಾರಣವಾಗುತ್ತದೆ.

ಕರ್ನಾಟಕದಲ್ಲಿ ಜೈನ ತೀರ್ಥಕ್ಷೇತ್ರಗಳನ್ನು ಕುರಿತು ವಿಸ್ತಾರವಾದ ಅಧ್ಯಯನ ನಡೆದಿಲ್ಲ. ಈ ಪುಟ್ಟ ಸಂಪ್ರಬಂಧದಲ್ಲಿ ಅಂಥದೊಂದು ಅಧ್ಯಯನಕ್ಕೆ ಭೂಮಿಕೆಯಾಗುವ ಸಂಕ್ಷಿಪ್ತರೂಪದ ಪ್ರಯತ ಮಾಡಿದ್ದೇನೆ; ಕನ್ನಡ ಶಾಸನಗಳಲ್ಲಿ ಸಿಗುವ 'ತೀರ್ತ'ಗಳನ್ನು ಹುಡುಕಿ ತೆಗೆದು, ಅವುಗಳ ಸಂಬಧವಾಗಿ ಅತಿ ಸಂಗ್ರಹವಾದ ಮಾಹಿತಿಗಳನ್ನು ಕೊಟ್ಟಿದ್ದೇನೆ.

೧. ಒಂದು ನಿಸದಿ ಶಾಸನದಲ್ಲಿ ಬಬ್ಬ 'ತೀರ್ತದ ಗೊರವಡಿ'ಗಳನ್ನು ಸ್ಮರಿಸಲಾಗಿದೆ. [ಎ.ಕ.೨,೬(೫) ಕ್ರಿ.ಶ, ೮ನೆಯ ಶ.ಪು. ೬]

೨. ತೀರ್ಥಕ್ಷೇತ್ರದಲ್ಲಿದ್ದ (ಮುಖ್ಯ) ಬಸದಿಗೆ 'ತೀರ್ತದ ಬಸದಿ' ಎಂದು ಹೇಳ್ಲಿದೆ [೧. ಸೌ೧೧.೧೫.೫೯೮ ೧೨ ನೆಯ ಶ, ತಮ್ಮ ಧಡ್ಡಿ (ಬಿಜಾಪುರ ಜಿ/ಮುದ್ದೇಬಿಹಾಳ ತಾ). ಪು. ೩೯೧] ೨. ಎ.ಕ.೨, ೫೨೦ (೪೮೪) ಮತ್ತು ೫೨೧ (೪೮೫) ೧೧ನೆಯ ಶ.]

೩. ಶ್ರೀಮತ ಪಟ್ಟಣಸ್ವಾಮಿ ನೊಕೆಯ್ಯ್ ಸೆಟ್ಟಿಯನ್ನು 'ಜಂಗಮತೀರ್ತ' ವೆಂದು ಪ್ರಶಂಸಿಸಲಾಗಿದೆ [ಎ.ಕ. ೮, ನಗರ ೫೭. ೧೦೭೭. ಹೊಂಬುಜ–(ಶಿವಮೊಗ್ಗ ಜಿ/ ನಗರ ತಾ) ಪು. ೩೮೫. ಸಾಲು;೨೨–೩೧ ] ನೋಡಿ ; ನಾಗರಾಜಯ್ಯ,ಹಂಪ; ಸಾಂತರರು–ಒಂದು ಅಧ್ಯಯನ, ೧೯೯೭

೪. ತೀರ್ಥಕ್ಷೇತ್ರಗಳಿಗೆ ಮಾಡುವ ವಂದನೆ ತೀರ್ಥವಂದನೆ. ಬಬ್ಬ ಶ್ರಾವಕನು ತೀರ್ಥವನ್ನು ವಂದಿಸಿದ ಸಂಗತಿಯನ್ನು ಒಂದು ಶಾಸನ ದಾಖಲಿಸಿದೆ [ಎ.ಕ.೧೧ (೧೯೭೩) ೫(೪) ೧೦ ಶ. ಪು. ೬ ಸಾಲು;೧–೨] ಮಲ್ಲಿಸೇನ ಬಟಾರರ ಗುಡ್ಡಂ ಚಊಜಯ್ಯ್ಂ ತೀರ್ತಮಂ ಬಂದಿಸಿದಂ.

೫. ಪ್ರಾಚೀನ ಹಾಗೂ ಈ ಭಾಗದ ಮೂಲ ತೀರ್ಥ(ಪುಣ್ಯ) ಕ್ಷೇತ್ರವೆಂಬ ಅರ್ಥದಲ್ಲಿ 'ಆದಿತೀರ್ಥ' ಎಂದು ಹೇಳಲಾಗಿದೆ.

ಕೆಲ್ಲಂಗೆಱಿಯ ತೀರ್ಥವನೂ [ಎ. ಕ. ೨, ೪೭೬ (೩೪೫) ೧೧೫೯. ಚ್ರಿ. ೨೮೯ ಸಾಲು ;೪೫] ಕೊಪಣ ತೀರ್ಥವನೂ[ಅದೇ:೫೩೨ (೨೮೪) ೧೨ ಶ. ಜಿನನಾಥಪುರ. ಪು೩೨೮, ಸಾಲು : ೨೭] ಆದಿ ತೀರ್ಥವೆಂದು ಕರೆಯಲಾಗಿದೆ. ಆದಿಜಿನರಾದ ಆದಿನಾಥ ತೀರ್ಥಂಕರರನ್ನು 'ಆದಿತೀರ್ಥ'ವೆಂದು ಕರೆಯುವುದುಂಟು. **i.** ಈ ಭವಕ್ಕೆಂಟನೆಯ

ಭವದೊಳ ಭರತದೊಳ ನೀನಾದಿ ತೀರ್ಥ ಫ್ರವರ್ತಕನಾದಂದೀ ಶ್ರೆವೆಮತಿ ದಾನತೀರ್ಥ ಫ್ರವರ್ತಕಂ ಶ್ರೇಯಾಂಸನಕ್ಕುಂ [ಪಂಪ: ಆದಿಪುರಾಣ ೫–೧೩೨]

೧. ಶ್ರೀಮತಪಿತ್ರ+ಅಕಳಮನನ್ತ ಕಲಂ

ಸ್ವಾಯಂಭುವಂ ಸಕಳ ಮಂಗಳಮಾದಿ ತೀರ್ತ್ಥಂ

ನಿತ್ಯೋತ್ಸವಂ ಮಣಮಯಂ ನಿಳಯಂ ಜಿನಾನಾಂ

ತ್ರೈಳೋಕ್ಯ ಭೂಷಣಮಹಂ ಶರಣಂ ಫ್ರಪದ್ಯೇ ॥

[ಎ. ಕ. ೮–೨, ಸಾಗರ ೧೫೯ . ೧೧೫೯. ಲೆರಕೆರೆ (ಶಿವಮೊಗ್ಗ ಜಿ/ಸಾಗರ ತಾ.) ಪು. ೩೩೧–೩೩]

ಆಧಿನಾಥ ತೀರ್ಥಂಕರರ ಬಸದಿ ಇದ್ದ ಸ್ಥ ಳವೆಂಬ ಕಾರಣಕ್ಕಾಗಿ 'ಆದಿ ತೀರ್ಥ ' ಎಂಬ ಹೆಸರಾಯಿತೆ? ತುಂಬ ಫ್ರಾಚೀನವಾದ ತೀರ್ಥವೆಂಬ ಅರ್ಥವೆಂಬ ಈ ಶಬ್ದ ಫ್ರ್ಯೋಗವಾಯಿತೆ ? ಎಂಬುದು ಚಿಂತನೀಯವಾದುದು. 'ಮಹಾತೀರ್ತ' ಎಂಬ ಇನೊಂದು ಶಬ್ದವೂ ಇರುವುದುರಿಂದ ಈಪದದ ಅರ್ಥ ಫ್ರತೀತಿಗೆ ಬೆಳಕುಬೀರಬಹುದು. ಇದರ ಸಂಬಂದವಾದ ಉಲೇಖ; ಪ್ರಿಯದಿನ್ದಂ ಹುಳ ಸೇನಾಪತಿ ಕೊಪಣ ಮಹಾತೀರ್ಥದೊಳ. ಬಹು ಕನಕಮನಾ ಕ್ಷೇತ್ರಜರ್ಗಿತ್ತು [ಎ,ಕ. ೨, ೪೭೬ (೩೪೫) ೧೧೫೯. ಪು.೨೮೯] ಈ ಬಗ್ಗ ವಿವರವಾದ ಚರ್ಚೆಯನ್ನು ಮತ್ತೆ ಕೆಲ್ಲಂಗೆಟ್ ತೀರ್ತ ಕುರಿತ ವಿವೇಚನೆಯ ಕಕ್ಷೆಯಲ್ಲಿ ನೋಡಬಹುದು.

೬. ಬಿಜಾಪುರ ಜಿಲ್ಲೆ ಬಾಗೇವಾಡಿ ತಾಲೂಕು ಇಂಗಳೇಶ್ವರ ತೀರ್ತವೂ ಇಂಗಳೇಶ್ವರ ಬಳಿಯೂ ಜೈನ ಪರಂಪರೆ ಯಲ್ಲಿ ವಿ ಶೇಷ ಸ್ಥಾ ನ ಪಡೆದಿದೆ.

ಸ್ವಸ್ತಿ ಶ್ರೀಮದಿಂಗಳೇಶ್ವರದ ತೀರ್ತದ ಬಸದಿಯಾ

ಚಾರ್ಯ್ಯರು ದೇವಚಂದ್ರ ಭಟ್ಟಾರಕ ದೇವರ

ಗುಡ್ಡ ಬಮ್ಮ ಗಾವುಣ್ಡನ ಪುತ್ರ ಭೋಗಗಾವುಣ್ಡನ ನಿಷಿದಿ

[ಸೌ. ಇ. ಇ ೨. ೧೫ . ೫೮. ೧೨ ಶ. ತಮ್ಮ ಧಡ್ಡಿ (ಬಿಜಾಪುರ ಜಿ/ ಮದ್ದೇಬಿಹಾಳ ತಾ.) ಪು. ೩೯೧]

ಈಶಾಸನೋಕ್ತ ದೇವಚಂದ್ರ ಭಟ್ಟಾರಕರು, ಚಾಳುಕ್ಯ ತ್ರೈಳೋಕ್ಯಮಲ್ಲ ಒಂದನೆಯ ಸೋಮೇಶ್ವರ ಚಕ್ರಿಯ ಮಗನಾದ 'ವಿಷ್ಣುವರ್ಧನ-ವಿಜಯಾದಿತ್ಯ- ಕೀರ್ತಿವರ್ಮ'ನ ಹುರುಗಳೆಂಬುದು ವಿಶೇಷ ಗಮನಿಕೆಗೆ ಅರ್ಹವಾದ ಚಾರಿತ್ರಿಕ ಮಹತ್ವದ್ ಉಲೇಖ, [ನಾಗರಾಯ್ಯ್, ಹಂಪ : ವಿಷ್ಣುವರ್ಧನ -ವಿಜಯಾದಿತ್ಯ ಕೀತಿವರ್ಮ; ೧೯೯೬ ]ಕಲಾಣ್ಯ ಚಾಳುಕ್ಯರ ತೀರ್ತದ ವಿಚಾರವಾಗಿ ಇನೂ ಕೆಲವು ಶಾಸನ ಮಾಹಿತಿಗಳು ಉಪಲಬ್ದವಾಗಿವೆ. ಇಂಗಳಿಗೆಯ(ಗುಲ್ಬರ್ಗ ಜಿ/) ಬಸದಿಗಳಲ್ಲಿ ಒಂದನ್ನು ಚಾಳುಕ್ಯರ ಆರನೆ ವಿಕ್ರಮಾದ್ಯಿತನ ರಾಣಿ (ಕಲುಚುರಿ) ಜಾಕದೇವಿಯು ಕ್ರಿ.ಶ.೧೯೪ ರಲ್ಲಿ ಕಟ್ಟಿಸಿದಳು [ಎ.ಆರ್.ಐ.ಇ.೧೯೬೦.ಬಿ.-೪೪೧.: ಜೆಎಸ್ಐ (೧೯೫೭) .ಪು. ೨೩೬-೩೯. ೧೯೫] ಇಂಗಳೇಶ್ವರ ತೀರ್ಥಬಳಿ ಸಂಬಂದವಾಗಿ ಪರಿಶೀಲಿಸಬೇಕಾದ ಶಾಸನಗಳು : ಸೌ. ಇ. ಇ. ೧೫, ೫೪೪. ೧೧೬೦ : ಅದೇ ೫೫೦ . ೧೧೯೪: ಅದೇ ೬೦೫ .೧೨೧೨: ಅದೇ ೬೦೬ .೧೨೧೫: ಎ.ಕ.೭, ನಾಮಂ ೭೨.೧೧೮೩ ಅಳೀಸಂದ್ರ: ಎ.ಕ.೪. ಪಿರಿಯಪಟ್ಟಣ ೧೨೫.೧೩೮೪. ರಾವಂದೂರು: ಎ.ಕ. ೧೧೧. 'ನಂಜನಗೂಡು ೧೩೭. ೧೩೭೨. ಹುಲ್ಲಳಿ -ಇತ್ಯಾದಿ.

೭. ಮಂಡ್ಯ ಜಿಲೆ ನಾಗಮಂಗಲ ತಾಲೂಕು ಕಂಬದಹಳ್ಳಿ ತೀರ್ತವು ಬಿಂಡಗೆನವಿಲೆ ತೀರ್ತದ ಒಂದು ಭಾಗವಾಗಿತ್ತು. ಇಲ್ಲಿ ಏಳು ಬಸದಿಗಳಿದ್ದುವು. :ಅವುಗಳಲ್ಲಿ ಕೆಲವು ಪೂರ್ಣವಾಗಿ

ಹಾಳಾಗಿವೆ. ಪಂಚಕೂಟ ಬಸದಿ, ಬೆಟ್ಟದ ಚಂದ್ರಪ್ರಭಸ್ವಾಮಿ [ಎ.ಕ. (೧೯೭೯) ನಾಮಂ. ೩೭(೧ಳ ನಾಮಂ ೧೩ಳ) ಪು. ೨ಳ] ಶಾನ್ತಿನ್ನಾಥ ಧೇವರ ಬಸದಿ [ಅದೇ: ನಾಮಂ. ೩೦(೧ಳ ನಾಮಂ.೧೩೦) ಪು. ೧೯] ಮೊದಲಾದ ಮಾಹಿತಿಗಳು ಸಿಗುತ್ತವೆ. ಕಂಬದಹಳ್ಳಿ ತೀರ್ತ್ಥವು ಹನಸೋಗೆ ಮಠಕ್ಕೆ ಪ್ರತಿಬದ್ಧವಾಗಿದ್ದಂತೆ ಒಂದು ಶಾಸನದಲ್ಲಿದೆ. [ಅದೇ: ನಾಮಂ. ೨೬ (ಳನಾಮಂ ೨೦) ೧೧೬೮. ಕಂಬಹಳಿ ಪು. ೧೭ ಸಾಲು:೨] ಜಗೆತೆ ಇದು ಚಂಗಾಳ್ವರಿಗೂ (ಚಂಗಿಕುಳ) ಆರಾಧ್ಯವೆನಿಸಿತ್ತು [ಅದೇ: ನಾಮಂ. ೨೯(೧ಳ ನಾಮಂ ೧೨೯) ೧೧೭ಳ. ಕಂಬದಹಳ್ಳಿ ಪು. ೧೮] ಆದರೆ ಮುಂದಿನ ಶತಮಾನದಲ್ಲಿ ಕಂಬದಹಳ್ಳಿ ತೀರ್ತ್ಥಕ್ಕೆ ಎಕ್ಕೋಟಜಿನಾಲಯ ವೆಂದು ಮರುಹೆಸರು ದೊರೆತು, ಆ ಕಾಲ ಘಟ್ಟದಮತೀಯ ಸಂಘರ್ಷಗಳು ತಲಪಿದ ನೆಲೆಯನ್ನು ತೋರಿಸುತ್ತದೆ: ಮೂಲ ಸಂಘ ದೇಸಿಗ ಗಣ ಪುಸ್ತಕಗಚ್ಛದಕಂಬದ ಹಳಿಯ ತೀರ್ತವ ಎಕ್ಕೋಟ ಜಿನಾಲಯವೆಂದು ಹೆಸರುಂ ಭೇರೀ ಪಂಚಮಹಾಶಬ್ದುವಂ ಎಕ್ಕೋಟ ಮಹಾರುದ್ರಾರಿಳ್ದು ಕೊಟ್ಟರು ಅದನಾಗದೆಂದವಂ ಶಿವದೋಹಿ [ಅದೇ: ನಾಮಂ.೩೧ (೧ಳ ನಾಮಂ ೧೩೧) ೧೩ ಶ. ಕಂಬದಹಳಿ ಪು. ೧೯ ಸಾಲು: ೨].

೮. ಕಡಸತವಾದಿ ತೀರ್ತ್ಥ– ಕಳಸತವಾದಿ ತೀರ್ತ್ಥ ಕುರಿತು ಎರಡು ಶಾಸನ ಪ್ರಯೋಗಗಳು ಸಿಗುತ್ತವೆ. ಇವೆರಡು ರೂಪಗಳೂ ಒಂದೇ ಊರಿನ ಭಿನ್ನನಾಮ ರೂಪಗಳೆಂಬುದು ರೂಪಗಳೆಂಬುದು ನಿಶ್ಚಯ.ಕಡ(ಳ) ಸತವಾದಿಯು ಶ್ರವಣ ಬೆಳುಗೊಳದ ನೆರೆಹೊರೆಯ ಗ್ರಾಮ. ಹನ್ನೊಂದನೆಯ ಶತಮಾನಕ್ಕೆ ಸೇರಿದ ಎರಡು ದಾನ ಶಾಸನಗಳಲ್ಲಿ ಈ ತೀರ್ತ್ಥದ ಪ್ರಸ್ತಾಪ ಬಂದಿದೆ.

ಅ. ಶ್ರೀ ಮದ್ದೇವಣನ್ದಿ ಭಟ್ಟಾರಕರ ಗುಡ್ಡಿ ಮಾಳೆಬ್ಬೆ ಕಡಸತವಾದಿಯ ತೀರ್ತ್ಥದ ಬಸದಿಗೆ ಕೊಟ್ಟಳ

[ಎ.ಕ. ೨, (೧೯೭೩) ೫೨೦ (೪೮೪)೧೧ ಶ. ಪು.೩೨೨]

ಆ ಶ್ರೀಮತ ಕಣಬೆ ಕನ್ತಿಯರು ಕಳಸತವಾದಿಯ ತೀರ್ತ್ಥದ ಬಸದಿಗೆ ಕೊಟ್ಟಳ

[ಎ. ಕ. ೨, (೧೯೭೩) ೫೨೦ (೪೮೪) ೧೧ಶ. ಪು. ೩೨೨]

ಆ ಶ್ರೀಮತ ಕಣಬೆ ಕನ್ತಿಯರು ಕಲಸತವಾದಿಯ ತೀರ್ತ್ಥದಬಸದಿಗೆ ಕೊಟ್ಟರ [ಅದೆ: ೫೨೧ (೪೮೫) ೧೧. ʼಶ.] ದಾನಗಳನ್ನು ಕೊಟ್ಟ ಇಬ್ಬರೂ ಮಹಿಳೆಯರು. ಅವರಲ್ಲಿ ಬಬಾಕೆ ಶ್ರಾವಕಿ (ಗೃಹಿಣಿ). ಇನೊಬ್ಬಾಕೆ ಆರ್ಯಿಕೆ (ಕಂತಿ, ಸನ್ಯಾಸಿನಿ ), ಇಬ್ಬರೂ ದಾನಕೂಟ್ಟುದ್ದು ಒಂದೊಂದು ಜಿನ ಬಿಂಬಗಲನ್ನು ದನವಾಗಿ. ಕೊಟ್ಟ ಪಂಚಲೋಹದ ಜಿನಬಿಂಬಗಳ ಪಾದ ಪೀಠದ ಹಿಂಬದಿಯಲ್ಲಿ ಈ ಎರಡೆರಡು ಸಾಲಿನ ಶಾಸನ ಬರೆಹದ ಒಕ್ಕಣೆಯಿದೆ. ಈ ಶಾಸನ್ನೋಕ ವ್ಯಕ್ತಿಗಲ ಇತಿವೃತ್ತವನ್ನು ಶಾಸನಗಳಲ್ಲಿ ಸಿಗುವ ಮಹಿತಿ ಯಿಂದ ಗುರುತಿಸಬಹುದೆ ಎಂದು ಪರಿಶೀಲಿಸಿದ್ದೇನೆ.

೧. ಬಬ್ಬ ಕಣಬ್ಬರಸಿಯ ಮತ್ತು ಆಕೆಯ ಮೂವಟು ತಮ್ಮಂದಿರುಗಲಾಅದ ಚಾಮಯ್ಯ ದಮ್ಮಡಯ್ಯ್ ನಾಗವರ್ಮ್ಮರು ಬೆಳುಗೊಲಕ್ಕೆ ಬಂದು ದೆವರಿಗೆ ವಂದನೆ ಮಡಿದರೆಂದು, ಚಿಕ್ಕಬೆಟ್ಟದ ಮೇಲೆ ಲಕ್ಕಿದೊಣೆಯ ಪ್ಪಶಿಮಕ್ಕೆ ಬಂಡೆಯ ಮೇಲೆ ಕೆತ್ತಲಾಗಿರುವ ಹತ್ತನೆಯ ಶತಮಾನದ ಶಾಸನ ಹೇಳುತ್ತದೆ. [ಅದೇ: ೨೪೧ (೪೬೬) ಪು. ೧೫೧] ನಾಮಸಾದೃಶ್ಯ ಹಾಗೂ ಕಾಲದ ಹೊಂದಾಣಿಕೆ ಅಷ್ಟರಿಂದಲೇ ಕಣಬ್ಬರಸಿಯೂ ಕಣಬೆ ಕಂತಿಯೂ ಅಭನ್ನರೆಂದು ಸಾಪಿಸುವುದು ಕಷ್ಟ. ಅಂದರೆ ಕಣಬ್ಬರಸಿಯೂ ಕಣಬೆ ಕಂತಿಯೂ ಅಭಿನ್ನರೆಂದು ಸಾಪಿಸುವುದು ಕಷ್ಟ. ಅಂದರೆ ಕಣಬ್ಬರಸಿಯು ಬೆಳುಗೊಳಕ್ಕೆ

ತೀರ್ಥವಂದನೆಗೆ ಒಂದು, ದೀಕ್ಷೆ ಹೊಂದಿ ಕಣಬ್ಬಕಂತಿ ಆಗಿಕಬಹುದೆಂದು ಊಹಿಸಲು ಅವಕಾಶವಂತೂ ಇದೆ.

೨. ಮಾಳಬ್ಬೆ ಶ್ರಾವಕಿಯ ಗುರುಗಲಾದ ದೆವಣಂದಿ ಭಟಾರಕರೂ (ಶ್ರಭೆ) ಚಿಕ್ಕ ಬೆಟ್ಟದ ಮೇಲಿನ ಪಾರ್ಶ್ವನಾಥ ಬಸದಿಯ ಬಲಗಡೆ ಬಂಡೆಯ ಮೇಲಿರುವ ೫೨(೪೯) ನೆಯ ಸಂಖ್ಯೆಯ. ಹತ್ತನೆಯ ಶ. ದ. ಶಾಸನೋಕ್ತ ದೇವನಂದಿ ಬಳರರೂ ಬಬ್ಬರೇ ಎಂದು ತೋರುತ್ತದೆ. [ಅದೇ.: ೫೨ (೪೯) ೧೦ ಶ. ಪು೧೭]

ಕ(ಳ) ಡಸಹಿ ವಾದಿ ತೀರ್ತ್ಥಣವು. ಹತ್ತನೆಯ ಶತಮಾನದ ಆರಂಭದ ವೇಳೆಗಾಗಲೇಸಿ ಕೀರ್ತಿಶಾಲಿಯಾಗಿತ್ತು. ಕನಕಗಿರಿಯ ತೀರ್ಥದ ಮೇಲಿನ ಬಸದಿಯನ್ನು ಕ್ರಿಶ, ೯೦೯ ರಲ್ಲಿ ಇಮ್ಮಡಿಮಲಯತಿಯದು ಹೇಳಿದಿ. ಇದರಿಂದ ಇನೂ ಹಿಂದಿಯೇ, ಪ್ರಾಯಶಃ ಒಂಬತ್ತನೆಯ ಶದ ಆದಿಭಾಗದಲ್ಲಿಯೇ ಇಲ್ಲಿ ಇನಿೂಂದು ಬಸದಿ ಇದ್ದಿತೆಂದು ತಿಳಿಯಬಹುದ.

ಜ ಪಶ್ಚಿಮ ಮದ್ದೂರು ತಾಲೂಕು ಕೂಳಿಗೆರೆಯ ಶಾಸನವೂ ಈ ಕನಕಗಿರಿ ತೀರ್ಥವನ್ನೂ ಅದರ ಆಚಾರ್ಯರನ್ನೂ. ಗಂಗರ ಆಳಿಕೆಯನ್ನ. ಮಣಲೆರೆಯರ ಬಸದಿಯನ್ನ ಕಟ್ಟಿಸಿದನೆಂಬುದನೂ ಸಮರವಾಗಿಯೇ ನಿರೂಪಿಸಿದಿ. [ಎ.ಕ. ೭ (೧೯೭೯) ಮದ್ದೂರು ೧೦೦ (೧೧೧ ಮ ಪ೩೦) ೯೧೬-೧೭. ಕೂಳಿಗೆರೆ. ಪು. ೩೧೩ ] ಗಂಗರ ನೀತಿಮಾರ್ಗ ಪೆರ್ಮಾನಡಿಯ

ಆಳಿಕಿಗಿ ಸೇರಿದ ಈ ಶಾಸನೋಕ್ತ.್ಜ ಸುರುಡು ಬಸದಿಯನ್ನು ಕನಕಗಿರಿ ತೀರ್ಥದ ಪೀಗಿ

ಪ ಾಡಿಸಿ, 'ಅರಸರ ಅಧ್ಯಕ್ಷದೊಳ್' (ರಾಜ ಸಮ್ಮುಖದಲ್ಲಿ) ತನಗೆ ಅಧಿಕಾರ ದತ್ತವಾಗಿ ಬಂದಿದ್ದ

ಅಟ್ಟದಿರಿ, ಕುರುದಿರು ಊಸೇರಿದುದಿ ಸಾಮಂತ ತಿರೆಗೆಗಳೆಲ್ಲವನೂ ಬಸದಿಗೆ ಬಿಟ್ಟುಕೊಟ್ಟನು .ಈ

ಬಸದಿಯ ಒಡೆತನ ಇದ್ದ ಕನಸೇನ ಭಟಾರರಿಗೆ ಈ ತಿಪ್ಪೆರು ಊರು ತಿರಿಗೆ ಸ್ವಾಮ್ಯವನ್ನು ಸಾಮಂತರ

ಮಣಿರುರನು ಬಿಟ್ಟು ಕೊಟ್ಟನು .ಗೆರ ಒಂದನೆಯ ಬೂತಗರಾಜನ (ಸು, ೮೭೦) ಮಗನಾದ

ಎರಿಗರಸ ಆಗ ಆಳುತ್ತಿದ್ದ ನೀತಿಮಾರ್ಗ ಪೆರಮಾನಡಿ ರಾಜ (೯೦೭ ೨೧).ಸಾಮಂತ

ಮಣಿರುರನು ,ಪ್ರಸಿದ್ಧವಾದ ಸಗರಣಿಯುರ ಪರಿಜನಾಗಿದ್ದನು [ನಾಗರಾಜಯ್ಯ ,ಡಾ.ಹ ಪ.

'ಶಾಸನಗಳಲ್ಲಿ ಎರಡು ಪಂಥಗಳು'. ಮುಂಬಯಿ ವಿಶ್ವವಿದ್ಯಾಲಯ (೧೯೯೫) ಪು.೩೯ ರಿಂದ ೭೬.]

ಕನಕಗಿರಿ ತೀರ್ಥವು ತಿಪ್ಪೂರು ತೀರ್ಥದಲ್ಲಿ ಅಂತರ್ಗತವಾಗಿತ್ತು: ಇದರ ಮುಂದುವರಿದು ಹೆಚ್ಚಿನಪರಿ

ಚರುವನ್ನು ಮತ್ತೆ ತಿಪ್ಪೂರು ತೀರ್ಥಕ್ಕೆ ಕುರಿತು ಪರಿಚಯಿಸುವಾಗ ಕೃಗಿತ್ತಿ ಕೊಳ್ಳಲಾಗುತ್ತದೆ.

೧೦. ಕಲುಕೆಟ್ ತೀರ್ಥವು ಬಿಜಾಪುರ ಜಿಲ್ಲೆಯ ಸಿಂದಾಗಾ ತಾಲೂಕು ಕಲ್ಕೇರಿಗೆ ಸೇರಿದುದಾಗಿದೆ:ಕಲುಕೆಟ್ ಔಕಲಕೇರಿ –ಕಲ್ಕೇರಿ ಎಂಬ ಕ್ರಮದಲ್ಲಿ ಈ ಸ್ಥಳನಾಮರೂಪದಲ್ಲಿ ಧ್ವನಿಮಾರ್ಪಾಟು ನಡೆದಿದೆ. ಯಾದವ (ಸೇಬಣ) ರಾಜ ಸಿಂಘಣನ ಇಬ್ಬರು ಪ್ರಧಾನ ಚೂಡಾಮಣಿಗಳೆಂದರೆ, (ಚಿಕ್ಕದೇವನ ಮಕ್ಕಳಾದ )ಮಲ್ಲ (ಮಲ್ಲಿ ಸೆಟ್ಟಿ)

ಮತ್ತು ಬೀಚಯ ದಂಡಾಧಿಪ ಸೋದರರು. ಬೀಚಿದೇವ ದಂಡನಾಥ ಚೂಡಾಮನಯು ಸಫ್ತಾಂಗರಾಜ್ಯ ಲಕ್ಷೀನಿವಾಸದಂತೆಅ ಸೆವದಕ್ಷಿಣ ರಾಯ ರಾಜನಿಧಾನಿ ಹುಲಿಗೆಱಿಯ ನೆಲೆ ವೀಡಿನಲ್ಲಿದ್ದು ರಾಜ್ಯವಾಳುತ್ತಿದ್ದನು.

ಹ(ಪ) ಗರಟ್‌ಗೆ ನಾಡು ಜಂಬೂದ್ವೀಪಕ್ಕೆ ಹಣೆ, ಅದರಲ್ಲಿ ಕಲುಕೆಱಿ ಪಟ್ಟನ ತಿಲಕವಾಗಿ ಶೋಭಿಸಿತು:

ದಮದಿರವಿದು ದಾನದ ತವರ್ಮ್ಮನೆ ಧರ್ಮ್ಮದ ಜನ್ಮಭೂಮಿ ನೀತಿಯ ನಿಜದಾಗರ ಮಹಿಯಾಗರಕುತ್ತರಮ. ಭಬ್ಯ ಕೋಏಯ ಮನ ವೆಚ್ಚುಮಚ್ಚುವೂಲನ್ನೆಂಬನ್ನೆಗಂ ಸೊಗಯಿಪು ದೀ ಧರತ್ರಿಯೊಳತಿ ಶೋಭೆಯಿಂ ಸೊಬಗನಾನ್ತು ಕಲುಕೆಱಿ ಎಂಬ ಪಟ್ಟಣಂ ॥ [ಸೌ. ಇ. ಇ. ೨೦, ೨೦೨. ೧೨೪೪. ಕಲಕೇರಿ ಪು ೨೫೨, ಸಾಲು : ४೨] ಹೀಗೆ ಕಂಗೊಳಿಸಿದ ದಿಬ್ಯ ತೀರ್ತ ಸ್ಥಳವಾದ ಲಲುಕೆರೆಯಲ್ಲಿಗೆ ಕಮಳಸೇನೆ ಭಟ್ಟಾರಕರು ಬಂದರು. ಮೂಲಸಂಘ ಪೊಗರಿಗಚ್ಛದ ಧರ್ಮಸೇನೆ ತ್ರೈವಿದ್ಯ ದೇವರ ಅಗ್ರಶಿಷ್ಯ ನಿಧಾನರು ಕಮಳಸೇನೆ ಭಟಾರಕರು ದೇವರು. ಮಹಾಮಹಿಮವಾದ ಅವರ ಫ್ರಭಾವ ಮತ್ತು ವ್ಯಕ್ತಿಶ್ವವನ್ನು ಶಾಸನಕವಿ ಕಂಡರಿಸಿದ್ದಾನೆ.

ನಾಡೆ ಗುಣ ಬ್ರತಾಭರನ ಸಯ್ಯಮತುಂಗ ತರಂಗದಿಂದೆ ಕ್ಕೆ
ಗೂಡಿದ ಸೀಲಫೇನ ಪರಿಪಾಂಡುರ ವ್ರಿತ್ತಿಯನ್ವಾನ ಸೋಭೆಯಿಂ
ನೋಡಿ ತಪೋವಿಳಾಸವತಿಯುಂ ಸಲೆಭಾರತಿಯುಂ ಸದಾಜಳ
ಕ್ರೀಡೆಯನಾಡುವರ್ಕಮಳಸೇನೆ ಶಾಂತರಸ ಫ್ರವಾಹದೊಳ ।

[ಕಮಳಸೇನೆ ಮುನಿಯ ಶಾಂತತೆಯು ರಸ ಪ್ರವಾಹವಾಗಿತ್ತು. ಅಧೀಕವಾದ ಗುಣಗಳ ವ್ರತ (ಗುಣವ್ರತ)ವೇ ಆಭರಣವಾಗಿ, ಇಂದ್ರಿಯ ನಿಗ್ರಹವೆಂಬ ಮೇಲೆದ್ದ ಅಲೆಗಳಿಂದ ಉಂಟಾದ ಶೀಲ (ಸಚ್ಚಾರಿತ್ರ್ಯ)ವೇ ನೊರೆಯೋಎಂಬಂತೆ ಸಟಿಕ ಪಾರದರ್ಶಕ ವೃತ್ತಿ (ನಡೆತೆ) ಯನ್ನು ಹೊಂದಿರುವುದರ ಶೀಭೆಯನ್ನು ಕಂಡ ತಪಸ್ಸೆಂಬ ವಿಳಾಸವತಿಯೂ ಭಾರತಿಯೂ ಕೂಡಿ ಸದಾ ಇಲ್ಲಿ ಜಲಕ್ರೀಡೆಯನ್ನು ಆಡುವರು. ]. ಇಂತಹ ತಪೊಧನರಾದ ಕಮಳಸೇನಭಟ್ಟಾರಕರು ದಿವ್ಯ ತೀರ್ತ್ಥಾಭಿವಂದನಾ ನಿಮಿತ್ತವಾಗಿ ವಿಹಾರಿಸುತ್ತ ಈ ಶೋಭಾಯಮಾನವಾದ ಕಲುಕೆರೆಯ ದಿಬ್ಯ ತೀರ್ಥ ಸ್ಥಳಕ್ಕೆ ಆಗಮಿಸಿದರು. ತೀರ್ಥಕ ಪ್ರತಿಷಯ ಚೈತ್ಯಾಲಯವನ್ನು ಸುಮುಹೂರ್ತದಲ್ಲಿ ನಿರ್ಮಿಸುವಂತೆ ಬೆಸಸಿದರು. ಕಲುಕೆರೆಯ ತೀರ್ತ್ಥದಲ್ಲಿ ನೋಂಪಿಯ ನಿಮಿತ್ತವಾಗಿ ಮಾಡಿಸಿದ ಅನಂತ ತೀರ್ಥದೇವರ ಬಸದಿಯೂ ಮಲ್ಲಿನಾಥ ಬಸದಿಯೂ, ಮಲ್ಲಿನಾಥ ದಾನಸಾಲೆಯೂ ಹೆಸರುವಾಸಿಯಾಗಿದ್ದುವು. ಪಂಚಮಗಾಶಬ್ದದ ಮರ್ಯಾದೆ ಪಡೆದಿದ್ದುವು. ಅಸಂಖ್ಯಾತ ಜನರು, ಅಮಳ ತಫೋದನರು 'ಕಲುಕೆಱ ತೀರ್ತ್ಥ'ವಂದನೆ ಮಾಡಿ ಪೂಜಿಸಿದರು.

.

೧೧. ಕಳ್ವಪ್ಪು ತೀರ್ತ್ಥವು ಕರ್ನಾಟಕವೇ ಅಲ್ಲದೆ ಇಡೀ ಭಾರತದಲ್ಲಿಯೇ ಪ್ರಾಚೀನ ತಮ ತೀರ್ತ್ಥಗಳಲೊಂದು ಕ್ರಿ.ಿ.ಪೂ. ೪-೩ನೆಯ ಶ. ದ. ವೇಳೆಗೆ ಅದರಕೀರ್ತಿ ಆಸೇತು ಹಿಮಾಚಲವಾಗಿತ್ತು. ಅಖಂಡವಾಗಿ ೨ ೧/೨ ಸಾವಿರ ವರ್ಷಗಳ ಧಾರ್ಮಿಕ, ಚಾರಿತ್ರಕ,. ಸಾಂಸ್ಕೃತಿಕ ಮಹತ್ವವನ್ನು ಗರ್ಭೀಕರಿಸಿ ಇಂದಿಗೂ ವರ್ಧಿಷು ಕ್ಷೇತ್ರ ವಾಗಿರುವ ಶ್ರವಣಬೆಳವೇ ಕಳ್ಬಪ್ಪು ತೀರ್ತ್ಥ. ಕಳ್ವಪು ಎಂದರ ಸಾವಿನ (ಸತ್ತವರ) ಗುಡ್ಡ ಎಂದರ್ಥ: ಮೊಹೆಂಜೊದರೊ ಎಂದರೂ ಇದೇ ಅರ್ಥ. ಃರಣವನ್ನು ಮಹಾನವಮಿಯೆಂದು ನಗುತ್ತಾ ಒರಮಾಡಿಕೊಳುವ, ಮುಡಿಪುವರ ಸಮಾಧಿಗುಡ್ಡವೇ ಕಳ್ವಪ್ಪು: ಶ್ರ.ಬೆ ದ ಚಿಕ್ಕಬೆಟ್ಟ. ಎಲ್ಲೆಲ್ಲಿಂದಲೊ ದೂರದ ಊರುಗಳಿಂದ ಸಮಾಧಿಗಾಗಿಯೇ ಬಂದು ಮುಡಿಸಿದ ಮುನಿಗಳ. ಹಾಗೂ ಕಂತಿಯರ ಕಥೆ ಹೇಳುತ್ತುವೆ ಇಲ್ಲಿನ ನೂರಾರು ಶಾಸನಗಳು. 1 ವ್ರತಶೀಲ ನೋಪಿಗುಣದಿಂದ, ಸ್ವಾಧ್ಯಾಯ ಸಂಪತ್ತಿನಿಂದ ತಪವೆಸಗಿದ ಸಸಿಮತಿ ಕಂತಿಯರು

ಕಳ್ವಿಪ್ಪಿನಲ್ಲಿ ನೋನ್ತು ತೀರ್ತ್ಥಗಿರಿ ಮೇಲೆ ಮುಡಿಪಿದರು. [ಎ.ಕ. ೨, (೧೯೭೩) .೮೬ (೭೬) ಶ. ಪು. ೬೭ ]

೩. ಬೆಟ್ಟದ ವೊಡೆಯನ (ಬಬ್ಬ ಜೈನಯತಿಯ )ಮಗಳು (ಶಿಷ್ಯ) ವೈಜಬ್ಬೆ (ಅಬ್ಬೆ. ಅವ್ವೆ =ಕಂತಿ) ಎಂಬಾಕೆಯು ಕಳ್ವಿಪ್ಪು ತೀರ್ಸ್ಥವಂದನೆ ಮಾಡಿದವರು. ಹಲವರು. [ಅದೇ : ೫೨(೪೯) .೧೦ ಶ. ಪು. ೧೭: ಅದೇ ೪೯ (೪೬) ೧೧ಶ. ಪು.೧೭]

೪. ಕಾಳ್ವಪು ತೀರ್ತ [ಅದೇ:೧೬ (೧೪) ೮. ್. ಪು ೮-೯] ಶ್ರೀ ಕಬ್ಬಪ್ಪು ತೀತ್ಥ [ಅದೇ: ೧೫೬ (೧೨೭) ೧೧೧೫ ಪು. ೯೭. ಸಾಲು: ೧೫೨: ಅದೇ ೫೬೮ (ಎಕ. ೫.ಚಪ ೧೪೮) ೧೦೯೪. ಹಳೇ ಬೆಳ್ಗೊಳ.ಪು. ೩೫೧ ] ಎಂಬ ಬೇರೆ ಶಬ್ದರೂಪಗಳು ಶಾಸನಗಳಲ್ಲಿವೆ.

೫. ಕಳ್ವಪ್ಪು ತೀರ್ತವೆಂಬುದು ಕಳ್ವಪ್ಪು ಬೆಟ್ಟ [ಅದೇ : ೩೧ (೨೮)] : ಅಂದರೆ ಚಿಕ್ಕ ಬೆಟ್ಟ. ಇದನ್ನು ಸಂಸ್ಕೃತೀಕರಿಸಿ ಕಟವಪ್ರನಲ್ಗಿರಿ [ಅದೇ: ೧೧೩ (೯೮) ೭ ಶ. ] ಕಟವಫ್ರಶೈಲ [ಅದೇ: ೮೫ (೭೫) ೭ ಶ. ] ರಿಷಿಗಿರಿಶಿಲೆ [ಅದೇ :೯೪ (೮೪) ೭ ಶ. ] ಎಂಬ ಅರಿಸಮಾಸರೂಪವೂ ಇದೆ. ಪೆರ್ಗಳ್ವಪ್ಪು [ಅದೇ: ೩೮ (೩೫) ೮ ಶ. ಪು. ೧೪ ಸಾಲು. :೪ ] ಎಂಬ ಫ್ರಯೋಗವೂ ಸಿಗುತ್ತದೆ.

೬. ಕಳ್ವಪ್ಪು ತೀರ್ತವು ಇಡೀ ದೇಶದಲ್ಲಿ ಎಂಥ ಪವಿತ್ರ ಕ್ಷೇತ್ರ ಎಂಬ ಜನ ಮನ್ನಣೆ ಪಡೆದಿತ್ತಂದರೆ, ಶಾಸನಗಳ ಅಂತ್ಯದಲ್ಲಿ ಶಾಪಾಶಯ ಪಂಕ್ತಿಗಳ ಪಟ್ಟಿಯಲ್ಲಿ ಸೇರಿಸಲಾಗಿದೆ. : ಅಂಥದೊಂದು ಅಪರೂಪದ ಫ್ರಯೋಗವಿದೆ. ಆಯ್ತುವರ್ಮ್ಮರಸರ ಮಾಡಿಸಿದೆರೆಡುನ್ದೆಗುಲಂ ಕೋಗಳಿಯು ಫ್ರೆಜೇವೆರಸಿ ಮೂಱನೆಯದೇಗುಲಂ ಇದನಱದೊ ಫ್ರಯಾಗೆಯುವಂ ಕುರುಕ್ಷೇತ್ರವುವಂ ಬಾಣರಾಸಿಯುವಂ ಕಱಪ್ಪು ವಂಸಾಸಿರ

ಕವಿಲೆಯುವಂ ಸಾಸಿರ್ಬಪಾರ್ ವ್ರ್ವರುವಂ ಸಾಸಿರ್ಬ್ಬರ್ ರಿಷಿಯರುವನ ಊದ ಪಾತಕನು ಬ್ರಹ್ಮಾತಿಕಾರನು ಮಕ್ಕುಂ ॥ [ಸೌ, ಇ. .೪೯-೧, ೭೭-೯೨. ಕೋಗಳಿ (ಬಳಾರಿಜಿ /ಹಡಗಲಿತಾ) ಪು.೪೯ .]

೧೨. ಕಾರ್ತಿಕಸ್ವಾಮಿ ತೀರ್ಥ: ಕೃತ್ತಿಕಾ ಪುರದ ಅಗಿರಾಜನು ತನ್ನ ಮಗಳು ಕೃತ್ತಿಕೆಯನ್ನು ಮದುವೆಯಾದನು : ಅವರಿಗೆ ಸ್ವಾಮಿಕರ್ತಿಕ ಎಂಬ ಮಗ ಮತ್ತು ವೀರ ಶ್ರೀ ಎಂಬ ಮಗಳು. ವೀರಶ್ರೀಯ ಪತಿ ಕೋಗಳಿಯರಾಜನಾದ ಕೌಂಚ. ಸ್ವಾಮಿಕಾರ್ತಿನು ದೀಕ್ಷೆ ಹೊಂದಿ ಭಿಕ್ಷೆಗೆ ಬಂದಾಗ ವೀರಶ್ರೀ ಯು ಮುನ್ನಿಯನ್ನು ಆಹಾರ ಸ್ವೀಕರಿಸಲು ಬೇಡಿದಳು. ಇದನ್ನು ದೂರದಿಂದ ನೋಡಿದ ಗಂಡ ಕೌಂಚ್ರ. ಸ್ವಾಮಿಕಾರ್ತಿಕನು ದೀಕ್ಷೆ ಹೊಂದಿ ಭಿಕ್ಷೆಗೆ ಬಂದಾಗ ವೀರಶ್ರೀಯು ಮುನಿಯನ್ನು ಆಹಾರ ಸ್ವೀಕರಿಲು ಬೇಡಿದಳು. ಇದನ್ನು ದೂರದಿಂದ ನೋಡಿದ ಗಂಡ ಕೌಂಚನು ತಪ್ಪಾಗಿ ತಿಳಿದನು. ಕಾರ್ತ್ತಿಕ ಋಷಿಗೆ ಆಯುಧದಿಂದ ಹೊಡೆದನು. ವ್ಯಂತರು ದೇವತೆ ನವಿಲು ರೂಪದಿಂದ ಬಂದು ಋಷಿಯನು ಎತ್ತಿಕೊಂಡು ,ಕೋಗಳಿಯ ಮೂಡಣದೆಸೆಯ ಬೆಟ್ಟದ ಕೊಳದ್ ತಡಿಯಲ್ಲಿಇಳಿಸಿತು. ಋಷಿ ಅಲ್ಲಿ ಮುಢಿಪಿದರು. ತಂಗಿ ವೀರಶ್ರೀ ಅಲೊಂದು ಬಸದಿ ಮಾಡಿಸಿದಳು. ಆ ಸ್ಥಳ ಕಾರ್ತ್ತಿಕ ಸ್ವಾಮಿ ತೀರ್ಥಮಾಯ್ತು [ಭ್ರಾಜಿಷ್ಣು , 'ವಡ್ಡಾರಾಧನೆ' : (ಸಂ) ನಾಗರಾಜಯ್ಯ್, ಡಾ. ಹಂಪ ; ಭೆಂಗಳೂರು ವಿಶ್ವ ವಿದ್ಯಾಲಯ (೧೯೯೩)]

ಇದು ಸು. ಕ್ರಿ.ಶ. ೮೦೦ ರಲ್ಲಿ ರಚಿತವಾದ ಭ್ರಾಜಿಷ್ಣುವಿನ 'ಆರಾಧಾನಾ ಕರ್ಣಾಟ ಟೀಕಾ' (ವೆಡಾರಾಧನೆ) ಕೃತಿಯಲ್ಲಿ ಬರುವ ನಿರೂಪಣೆ. ಈ ಕಾರ್ತಿಕ ಸ್ವಾಮಿ ಕಾರ್ತಿಕ ಬೆಟ್ಟ. ಇದು ಪ್ರಾಚೀನ ಜೈನ ತೀರ್ತ್ಥವಾಗಿದ್ದು ೧೨-೧೩ನೆಯ ಶತಮಾನದಿಂದೀಚೆಗೆ ಅಜೈನ ಕ್ಷೇತ್ರವಾಗಿದೆ. ಈಗಿಲ್ಲಿ ಬಸದಿಯುದ್ದ ಕುರುಹುಗಳೆಲ್ಲ ನಾಶವಾಗಿದೆ.

೧೩. ಕುರುಳಿಯ ತೀರ್ಥವು ೧೦–೧೧ ನೆಯ ಶತಮಾನದ ವೇಳೆಗೆ ಕೀರ್ತಿವೆಡೆದಿತ್ತು. ಗಂಗರು ಶಿವೆಮೊಗ್ಗ ಸಮೀಪ ಮಂಡಲಿ ತೀರ್ತ್ಥವನ್ನು ಸ್ಥಾಪಿಸಿದ್ದು ಕ್ರಿ.ಶ. ೪–೫ ನೆಯ ಶ. ದಲ್ಲಿ.ಅದೇ ಸರಿಸುಮಾರಿನಲ್ಲಿ ಈ 'ಕುರುಳಿಯ ತೀರ್ತ್ಥವನ್ನು ಸಾಪಿಸಿದ್ದು ಕ್ರಿ.ಶ. ೪–೫ ನೆಯ ಶ. ದಲ್ಲಿ ಅದೇ ಸರಿಸಮಾರಿನಲ್ಲಿ ಈ 'ಕುರುಳಿಯ ತೀರ್ತ್ಥದಲು ಗಂಗಜಿನಾಲಯ ಮಂಮಾಡಿ'ದರು. [ಎ.ಕ. ೭–೧ (೧೯೦೨) ಶೀಮೊಗ್ಗ ೬೪. ೧೦೬೭ ಮತ್ತು ೧೧೧೨. ಚ್ಫುರಲೆಗ್ರಾಮ (ಶಿವಮೊಗ್ಗ ಜಿ/ ತಾ)ಪು. **63-69]** ಅನಂತರ ಅದೇ ಗಂಗ ವಂಶಜರು ೧೧–೧೨ ನೆಯ ಶತಮಾನದಲೂ ನವೀಕಸುತ್ತ ಪಡಿಸಲಿಸುತ್ತ ಬಂದರು. ಸತ್ಯಗಂಗದೇವನು ಎಡೆಹಳಿಯ ನೆಲೆವೀಡಿನೊಳಗೆ ಸುಖದಿಂದ ರಾಜ್ಯವಾಳುತ್ತ ಅಲ್ಲಿ 'ಕುರುಳಿಯ ತೀರ್ತ್ಥದಲು ಗಂಗಜಿನಾಲಯಮಂ ಮಾಡಿ' , ೧೧೩೨ರಲ್ಲಿ ತನ್ನ ಧರ್ಮ ಗುರು ಗಳಾದ ಶ್ರೀಮಾಧವಚಂದ್ರರ ಕಾಲುತೊಳೆದು ದತ್ತಿಬಿಟ್ಟನು. ಮತ್ತೆ ಮಹಾ ಮಂಡೇಶ್ವರ ಗಂಗಹೆರ್ಮಾಡಿ ಹಾಗೂ ಇತರರು ಅರಸರ ಸನ್ನಿಧಿಯಲ್ಲಿ ಬಾಳಚಂದ್ರದೇವರಿಗೆ ಧಾರಾಪೂರ್ವಕ ಮಾಡಿಬಿಟ್ಟರು. ಅಲ್ಲದೆ. ಹೆಗ್ಗಡೆ ಚಂದಿಮಯ್ಯುನು ಕುರುಳಿಯ ತನ ಗೌಡಿಕೆಯನ್ನು ಕಲಿಯರ ಮಲ್ಲಿಸೆಟ್ಟಿ 'ಮಾಱಂಕೊಂಡು ' ದಾನ ಮಾಡಿದನು[ ಅದೇ; ಶೀಮೂಗ್ಗ ೬೪. ಚ್ಫು. ೬೯]

೧೪. ಕೆಲ್ಲಂಗೆಱಿ ತೀರ್ಥವನ್ನು ಕುರಿತು ಸಾಕಷ್ಟು ಮಾಹಿತಿಯು ಶಾಸನಗಳಲ್ಲಿ ಉಪಲಬ್ದವಿದೆ. ಲಾಸನ ಜಿಲ್ಲೆ ಬೇಲೂರು ತಾಲೂಕು ಹಳೆಯ ಬೀಡಿನ ಪರಿಸರವೇ ಕೆಲ್ಲಂಗೆರೆಯ ಆದಿತೀರ್ಥವೆಂದು ಕರೆದಿರುವುದು ಇದರ ಪುರಾತನತೆಯನೂ ಫ್ರಮುಖ್ಯವನ್ನೊ ಹೇಳುತ್ತದೆ. ಕೆಲ್ಲಂಗೆರೆ ತೀರ್ಥವು ಮೊದಲು (ಹಿಂದೆಯೇ) ಗಂಗರಿಂದ ನಿರ್ಮಿತವಾಗಿತ್ತು, ಗಂಗರು ನಂದಗಿರಿ, ಕುವಳಾಲಪುರ, ಶ್ರೀಪುರ, ತಿಪೂರು, ಕುರುಳಿ, ಮಂಡಳಿ, ಕೆಲ್ಲಂಗೆರೆ –ಇಲ್ಲೆಲ್ಲಾ

‘ತೀರ್ತ್ಥ’ಗಳನ್ನು (ಬಸದಿ) ನಿರ್ಮಿಸುತ್ತ ಈ ಎಡೆಗಳನ್ನು ತೀರ್ತ್ಥವಾಗಿಸಿದ್ದರು. ಆದರೆ ಮುಂದೆ ಕಾಲವಶದಿಂದ ಕೆಲ್ಲಂಗೆರೆ ತೀರ್ಥವು ನಾಮಾವದೇಷವಾಯಿತ್ತು. ಅದನ್ನು ಮತ್ತೆ ಹೊಸದಾಗಿಸಿದವನು ಹೊಯ್ಸಳರ ಹುಳ್ಳದಂಡಾಧಿಪನು [ಎ.ಕ. ೨. ೪೭೬ (೩೪೫) ೧೧೫೯. ಚೈ. ೨೮೯-೯೦ ಸಾಲು: ೪೫-೪೬] ಕೆಲ್ಲಂಗೆರೆಯಲ್ಲಿ ಹುಳ್ಳ ಭಂಡಾರಿಯು ಪಂಚಬಸದಿಗಳನ್ನು ಮಾಡಿಸಿದ ನು. [ಅದೇ] ಈ ಕೆಲ್ಲಂಗೆರೆಯನ್ನು ಹಲವರು ಹೊಗಳಿದರು. [ಎ. ಕ. ೯(೧೯೯೦) ಬೇ. ೩೮೮ (೫ ಬೇ ೧೨೩ )ಕ್ರಿ.ಶ. ೯೫೪. ಬಸ್ತಿಹಳ್ಳಿ (ಹಾಸನಜಿ /ಬೇಲೂರು ತಾ) ಪು. ೩೫೨)] ಇಲ್ಲಿದ್ದ ‘ತ್ರಿಕೂಟ ರತತ್ರಯ’ ಎಂಬ ಹೆಸನರಿನ ಶಾಂತಿನಾಥ ದೇವರ ಬಸದಿಗೆ ಇಲ್ಲಿಯೇ ಇದ್ದ ಪಾರ್ಶ್ವದೇವರ ಬಸದಿಯು ಪ್ರತಿಬದ್ದವಾಗಿತ್ತು [ಅದೇ:ಬೇ ೩೨೩ (೧೫ ಬೇ ೩೪೩) ೧೩ ಶ. ಹಳೇ ಬೀಡು ಪು. ೩೦೬] ಕೆಲ್ಲಂಗೆಱೆ ತೀರ್ತ್ಥದ ಚತು:ಸ್ಸೀಮೆಯನ್ನು ಸಹ ಶಾಸನ ತಿಳಿಸಿದೆ. [ಅದೇ: ಬೇ ೩೨೧(೧೫ ಬೇ ೩೪೨ ) ೧೨೬೫. ಹಳೇಬೀಡು. ಪು. ೨೯೯]. ೧೨ ನೆಯ ಶ. ದಲ್ಲಿ ಕೆಲ್ಲಂಗೆರೆಯು ‘ಶ್ರೀ ಕೊಲಾಪುರದ ಶ್ರೀರೂಪ ನಾರಾಯಣ ಬಸದಿಯ ಪ್ರತಿವಿದ್ದ’ವಾಗಿದ್ದುದನ್ನು ಶ್ರೀಮನ್ಮ ಹಾಪ್ರಧಾನಂ ಸರ್ವಾಧೀಕಾರಿ ಹಿರಿಯ ಭಂಡಾರಿ ಅಭಿನವ ಗಂಗದಂಡನಾಯಕ ಶ್ರೀಹುಳ್ಳರಾಜಂ ಪುನರ್ಬ್ಬರಣವಂ ಪುನರ್ಬ್ಬರಣವಂ ಮಾಡಿ’ ಸಿದನು [ಎ.ಕ. ೨, ೭೧ (೬೪) ೧೧೬೩. ಪು ೩೦. ಸಾಲು:೧೦೭-೧೧] ಕೆಲ್ಲಂಗೆ ಱೆ ತೀರ್ತ್ಥವನ್ನು ಕುರಿತು ಅಧ್ಯಯನ ಸಾಮುಗ್ರಿ ಸಾಕಷ್ಟಿದೆ.

೧೫. ಕೊಂಡಕುಂದೆಯ ತೀರ್ತ್ಥ:ಕಲ್ಯಾಣ ಚಾಳುಕ್ಯ ತ್ರಿಭುವನಮಲ್ಲ ಪೆರ್ಮಾಡಿ ವಿಕ್ರಮಾದಿತ್ಯನು (೧೦೭೬-೧೧೨೭) ಪೊಟ್ಟಲಕೆರೆಯಿಂದ ಆಳುತ್ತಿರುವಾಗ, ಮಹಾ ಮಂಡಲೇಶ್ವರ ಜೋಯಿಮಯ್ಯಸನು ಸಿಂದವಾಡಿ ಸಾವಿರ ಪ್ರದೇಶವನ್ನು ಬೀಳವೃತ್ತಿಯಿಂದ ನೋಡಿಕೊಳ್ಳುತ್ತಿದ್ದನು. ಈ ಅವದಿಯಲ್ಲಿ ನಾಲಿಕಬ್ಬೆ ಎಂಬ ಶ್ರಾವಕಿಯು ತನ್ನ ಭರ್ತಾರನಿಗೆ ಪರೋಕ್ಷ ವಿನಯರ್ಥವಾಗಿ ಕೊಂಡಕುಂದೆಯ ತೀರ್ಥದಲ್ಲಿ ಚಟ್ಟಜಿನಾಲಯವನ್ನು ೧೦೮೧

ರಲ್ಲಿ ಕಟ್ಟಿಸಿದಳು. ಅದಕ್ಕೆ ಮಹಾಮಂಡಲೇಶ್ವರನೂ ೩೦ ಮತ್ತರು ನೆಲವನ್ನೂ ಹೂವಿನ ತೋಯ ಮತ್ತು ಗಾಣವನ್ನೂ ಎಂಟು ಮನೆಯ ನಿವೇಶವನ್ನೂ ಬಿಟ್ಟುಕೊಟ್ಟನು [ಸೌ. ಇ. ಇ. ೯-೧, ೧೫೦. ೧೦೮೧. ಕೊನೆಕೊಂಡ್ಲ] ನಾಲಿಕಬ್ಬೆಯ ಗಂಡನ ಹೆಸರು ಚಟ್ಟ ಎಂದಿರಬೇಕು. ಬೇರೆ ಶಾಸನಗಳಲ್ಲಿ ಅಂತಹ ಹೆಸರುಗಳಿವೆ. ಉದಾಹರಣೆಗೆ ಚಟ್ಟಗಾವುಂಡ ಎಂಬ ಹೆಸರು ನೇರಿಲಗೆಯ ಶಾಸನದಲ್ಲಿದೆ. [ಸೌ.ಇ. ಇ. ೧೮, ೧೫೧. ೧೧೪೮]

೧೬. ಕೊಂಡಕುಂದೆಯ ತೀರ್ಥ:ಕಲ್ಯಾಣ ಚಾಳುಕ್ಯ ತ್ರಿಭುವನಮಲ್ಲ ಪೆರ್ಮಾಡಿ ವಿಕ್ರಮಾದಿತ್ಯನು (೧೦೭೬-೧೧೨೭) ಪೊಟ್ಟಲಕೆರೆಯಿಂದ ಆಳುತ್ತಿರುವಾಗ, ಮಹಾ ಮಂಡಲೇಶ್ವರ ಜೋಯಿಮಯ್ಯರಸನು ಸಿಂದವಾಡಿ ಸಾವಿರ ಪ್ರದೇಶವನ್ನು ಬೀಳವೃತ್ತಿಯಿಂದ ನೋಡಿಕೊಳ್ಳುತ್ತಿದ್ದನು. ಈ ಅವದಿಯಲ್ಲಿ ನಾಲಿಕಬ್ಬೆ ಎಂಬ ಶ್ರಾವಕಿಯು ತನ್ನ ಭರ್ತಾರನಿಗೆ ಪರೋಕ್ಷ ವಿನಯಾರ್ಥವಾಗಿ ಕೊಂಡಕುಂದೆಯ ತೀರ್ಥದಲ್ಲಿ ಚಟ್ಟಜಿನಾಲಯವನ್ನು ೧೦೮೧ ರಲ್ಲಿ ಕಟ್ಟಿಸಿದಳು. ಅದಕ್ಕೆ ಮಹಾಮಂಡಲೇಶ್ವರನೂ ೩೦ ಮತ್ತರು ನೆಲವನೂ ಹೂವಿನ ತೋಟ ಮತ್ತು ಗಾಣವನ್ನೂ ಎಂಟು ಮನೆಯ ನಿವೇಶವನ್ನೂ ಬಿಟ್ಟುಕೊಟ್ಟನು [ಸೌ. ಇ.ಇ. ೯-೧, ೧೫೦. ೧೦೮೧. ಕೊನಕೊಂಡ್ಲ] ನಾಲಿಕಭೆಯ ಗಂಡನ ಹೆಸರು ಚಟ್ಟ ಎಂದಿರಬೇಕು. ಬೇರೆ ಶಾಸನಗಳಲ್ಲಿ ಅಂತಹ ಹೆಸರು. ನೇರಿಲಗೆಯ ಶಾಸನದಲ್ಲಿದೆ. [ಸೌ. ಇ. ಇ. ೧೮, ೧೫೧. ೧೧೪೮]

೧೬. ಕೊಪಣ ಮಹಾತೀರ್ಥ : ಶ್ರವಣಭೆಳುಗೊಳದಷೇ ಪ್ರಾಚೀನ ಕ್ಷೇತ್ರ ಕೊಪಣ [ಕೊಪ್ಪಳ: ರಾಯಚೂರು ಜಿಲ್ಲೆ ] ಶ್ರವಣಬೆಳಗೊಳ ಚಿಕ್ಕ ಬೆಟ್ಟವನ್ನು ಕಳ್ವಪ್ಪು ತೀರ್ತ್ಥವೆಂದೂ, ಕೊಪ್ಪಳದ ಕೊಪಣಗಿರಿಯನ್ನು ಕೊಪಣ ಮಹಾತೀರ್ತ್ಥವೆಂದೂ ಕರೆದಿರುವುದರ ಹಿನ್ನೆಲೆಯನ್ನು ಅರಿಯಬೇಕು. ಕೆಲ್ಲಂಗೇಱ ತೀರ್ತ್ಥವನ್ನು ಆದಿತೀರ್ಥವೆಂದೂ, ಕೊಪಣದ ತೀರ್ಥವನ್ನು ಮಹಾತೀರ್ತ್ಥವೆಂದೊ ಶಾಸನಗಳು ವಿಶೇಷಣಗಳನ್ನಿತ್ತು ನಿರ್ದೆಶಿಸಿರುವುದು

ಇವುಗಳ ಚಾರಿತ್ರಿಕ ಮಹತ್ವವನ್ನು ಮಹಿಮೆಯನ್ನೂ ಮಹಿಮೆಯನ್ನೂ ಪ್ರಾಚೀನತೆಯನ್ನೂ ಧ್ವನಿಸುತ್ತವೆ.

೧. ಕೊಪಣತೀರ್ತ್ಥದಲ್ಲಿ [ಎ.ಕ. ೧೧(೧೯೭೩) ೨೨೦(೪೭೫)೧೦ಶ.] ಹಲವಾರು ಬಸದಿಗಳಿದ್ದುವು **JISI** (೧೯೫೭) ನಂ. ೨೯ ಪು. ೩೬೦]. ಕೆಲ್ಲಂಗೆರೆ, ಬಂಕಾಪುರ ಮೊದಲಾದ ಸ್ಥಳಗಳಲ್ಲಿ ಬಸದಿಗಳನ್ನು ಜೀರ್ಣೋದ್ಧಾರಿಸಿದ ಹುಳ್ಳ ಸೇನಾಪತಿ ಕೊಪಣ ಮಹಾತೀರ್ಥದಲ್ಲಿಯೂ ದಾನಾದಿಗಳಿಂದ 'ಲೋಕಮೆಲ್ಲಂ ಪೊಗಳೆ' ಜಿನ ಧರ್ಮಪ್ರಭಾವನೆ ಮಾಡಿದನು [ಎ.ಕ. ೨, ೪೭೬ (೩೪೫) ೧೧೫೯. ಪು. ೨೮೯]

೨. ಏಚಿರಾಜದಂಡನಾಯಕನು ಕೊಪಣಾ (ದ್ರಿ) ತೀರ್ಥದಲ್ಲೂ ಬೆಳುಗೊಳದಲ್ಲೂ ಇತರ ಎಡೆಗಳಲ್ಲೂ ಹಲವು ಬಸದಿಗಳನ್ನು ಮಾಡಿಸಿದನು; ಕಡೆಗೆ ಆತನು ಸಂನ್ಯ ಸನ ವಿಧಿಯಿಂದ ಮುಡಿಪಿದನು [ಅದೇ : ೫೩೨ (೩೯೪) ೧೨ ಶ. ಜಿನನಾಥಪುರ. ಪು ೩೨೮. ಸಾಲು: ೨೭– ೨೯]

೩. ಗಂಗವಾಡಿಯು ಕೊಪಣ (ತೀರ್ತ್ಥ) ವಾಯಿತೆ ಎಂಬಂತೆ ಗಂಗಣ ದಂಡನಾಥನು ಜಿನಾಲಯಗಳಿಂದ ತುಂಬಿಸಿದನು [ಎ.ಕ. ೯(೧೯೯೦) ಬೇ ೩೮೯. ೧೧೩೩.ಪು. ೩೫೩ ೫೭] ಕೊಪಣದಲ್ಲಿ ನೂರಾರು ಬಸದಿಗಳಿದ್ದುವು.

೪. ರನ್ನನೇ ಮೊದಲಾದ ಕವಿಗಳ ಕಾವ್ಯಗಳೂ, ಹತ್ತಾರು ಶಾಸನಗಳೂ ಕೊಪಣ ತೀರ್ಥವನ್ನು ಪ್ರಶಂಸಿಸಿವೆ.

೫. ಕೊಪಂಣ ತೀರ್ಥವು ಪ್ರಾರಂಭದಿಂದಲೂ ಯಾಪನೀಯ ಸಂಘದ ಅತ್ಯಂತ ಪ್ರಭಾವೀ ಕೇಂದ್ರವಾಗಿತ್ತು.೧೩ನೆಯ ಶತಮಾನದ ತರುವಾಯ ಕೊಪಣದ ಜೈನ ದೇವಾಲಯಗಳನ್ನೆಲ್ಲ ಶೈವರೂ, ವೀರಶೈವರೂ ಧ್ವಂಸ ಮಾಡಿದರು.

೬. ೧೯೬೪ ರಲ್ಲಿ ಹೊಸದಾಗಿ ಸುಮಾರು ೬೦ ಜೈನ (ನಿಸದಿ) ಶಾಸನಗಳು ಕೊಪಣದಲ್ಲಿ ದೊರೆತಿವೆ. ಕೊಪಣವು ಎಷ್ಟು ದೊಡ್ಡ ಜೈನ ಕ್ಷೇತ್ರವಾಗಿತ್ತೆಂಬುದಕ್ಕೆ ಸಾಕ್ಷಿಯಾಗಿವೆ.

೧೭. ಕೋಗಳಿ ತೀರ್ತ್ಥ (ಬಳ್ಳಾರಿಜಿ/ಹಡ್‌ಲಿ ತಾ): ಶಾಸನಗಳಲ್ಲಿ 'ಕೋಗಳಿ –೫೦೦ನಾಡು' ಎಂಬುದು ಪ್ರಸಿದ್ಧ ಆಡಳಿತ ವಿಭಾಗ:ಪ್ರಸಿದ್ಧನಗರ;ಜೈನರ ದೊಡ್ಡ ಕೇಂದ್ರ, ತೀರ್ಥಸ್ಥಳ. 'ನೊಳಂಬವಾಡಿ ಮೂವತ್ತೆರಡು ಸಾವಿರ'ದಲ್ಲಿ ವಿಲ್ಲೀನವಾಗಿದ್ದ ಕೋಗಳಿಯು ಗಂಗರು, ರಾಷ್ಟ್ರಕೂಟರು, ಚಾಳುಕ್ಯರು ಮತ್ತು ಹೊಯ್ಸಳರ ಆಡಳಿತಗಳಲ್ಲಿ ಉದ್ದಕ್ಕೂ ಜೈನರ ಸಾಂಸ್ಕೃತಿಕ ಹಿರಿಮೆಯನ್ನು ವಿಪುಲವಾದ ಅಂಜಿ ಅಂಶಳು ಸಿಗುತ್ತವೆ:

೧. ಸೌ.ಇ. ಇ. ೧, ಶಾಸನ ಸಂಖ್ಯೆ ೧೮೯, ೧೯೩, ೧೯೫, ೨೧೫, ೨೩೪, ೨೪೫, ೨೬೫, ೨೬೫, ೨೬೭, ೨೭೫, ೨೭೩

೨. ಸೌ. ಇ.ಇ. ೯–೧, ೧೧೭, ೧೪೧,೩೬೮ ಮೊದಲಾದ ಶಾಸನಗಳು

೩. ಬಾ. ಕ. ಇ. ೧–೧, ೨೨. ಕ್ರಿ.ಶ. ೮೯೭.

೪. ಕೋಗಳಿಯು ಬಸದಿಗಳ ಆರವೆಯಾಗಿತ್ತು ಇಲ್ಲಿನ ಒಂದು ಬಸದಿಯನ್ನು ಗಂಗರ ದುರ್ವಿನೀತ ರಾಜನು ಕಟ್ಟಿಸಿದ್ದು ಅದನು ೧೦೫೫ ರಲ್ಲಿ ಇಂದ್ರಕೀರ್ತಿಮುನಿ ಖಣ್ಡ ಸ್ಪುಟಿತವಾಗಿಸಿ ಜೀರ್ಣೋದ್ಧರಿಸಿದರು [ಸೌ.ಇ.ಇ. ೯–೧ ೧೧೭.೧೦೫೫.ಕೋಗಳಿ.ಪು. ೯೨. ಸಾಲು:೧೫–೧೬]

೫.    ಒಂದು ಶಾಸನದಲ್ಲಿ ಕೋಗಳಿಯು ಹನಸೋಗೆಯ ಪ್ರತಿಬದ್ಧವಾಗಿತ್ತೆಂದು ನಮೂದಾಗಿದೆ [ಅದೇ: ೩೬೦.ಸು. ೧೨೦೦. ಸೋಗಿ (ಬಳ್ಳಾರಿಜಿ/ ಹಡಗಲಿತಾಪು.೩೭೭]

೬.    ಕೋಗಳಿಯ ತೀರ್ತ್ಥದ ಚೆಂನಪಾರ್ಶ್ವದೇವರಿಗೆ ಶ್ರೀಮನ್ನಾಳ್ವಪ್ರಭು ದೇವಿ ಸೆಟ್ಟಿಯರು ಅಕ್ಷಯ ಭಂಡಾರವಾಗಿ ನಿತ್ಯಾಬಿಷೇಕಕ್ಕೆ ಕೊಟ್ಟ ನೂರು ಗದ್ಯಣ ದಾನದ ವಿವರವಿದೆ [ಅದೇ: ೩೪೭. ೧೨೭೬. ಪು. ೩೬೯. ಸಾಲು ೪–೫]

೭.    ಇನ್ನೊಂದು ಶಾಸನದಲ್ಲಿ ಇದೇ ಶ್ರೀಮನ್ನಾಳ್ವ ಪ್ರಭು ಮಹದೇವ ಸೆಟ್ಟಿಯರು ಮತ್ತು ಇತರ ೩೫ ಜನ ಗಂಡಸರು –ಹೆಂಗಸರು ಕೋಗಳಿಯ ತೀರ್ತ್ಥದ ಚೆಂನ ಪಾರ್ಶ್ವದೇವರಿಗೆ ನಿತ್ಯ ಅಭಿಷೇಕಕ್ಕೆ ಕೊಟ್ಟ ನೂರು ಗದ್ಯಣ ದಾನದ ವಿವರವಿದೆ [ಅದೇ :೩೪೭. ೧೨೭೬.ಪು. ೩೭೦. ಸಾಲು ೧–೪೦]

೧೩. ಗೊಂಮಟದೇವರ ತೀರ್ತ್ಥ: ಶ್ರವಣ ಬೆಳ್ಗೊಳ ದೊಡ್ಡ ಬೆಟ್ಟದ ಮೇಲಿನ ಶಾಸನದಲ್ಲಿ 'ಶ್ರೀ ಗೊಂಮಟ ದೇವರ ತೀರ್ಥ' ಎಂದಿದೆ. [ಎ.ಕ. ೨, ೩೭೪ (೨೬೮) ೧೧೧೮. ಪು. ೨೪೧. ಸಾಲು ೩೨] ಕಟವಪ್ರಗಿರಿ, ಕಳ್ಬಪ್ಪು ತೀರ್ತ್ಥ, ಗೊಂವಟದೇರ ತೀರ್ತ್ಥ, ತೀರ್ಥಗಿರಿ, ಬೆಳ್ಗೊಳ ತೀರ್ತ್ಥ,ರಿಷಿಗಿರಿ–ಇವೆಲ್ಲವೂ ಶ್ರವಣಬೆಳ್ಗೊಳ (ಚಿಕ್ಕಬೆಟ್ಟ) ವನ್ನು ಸೂಚಿಸುವ ಪರ್ಯಾಯ ಶಬ್ದಗಳು.

೧೪. ತಿಪ್ಪೂರು ತೀರ್ತ್ಥ: ಮಂಡ್ಯಜಿಲ್ಲೆ ಮದ್ದೂರು ತಾಲ್ಲೂಕಿನಲ್ಲಿರುವ ಅರೆತಿಪ್ಪೂರು ಒಂದು ಪ್ರಾಚೀನವಾದ ಜೈನ ತೀರ್ತ್ಥಕ್ಷೇತ್ರ . ಕ್ರಿ.ಶ. ೯ರಿಂದ ೧೭ನೆಯ ಶ.ದ ವರೆಗೆ

ಹೆಸರುವಾಸಿಯಾದ ಈ ತೀರ್ಥತ್ತುಳುವು ಕೆಳಲೆ ನಾಡಿಗೆ ಸೇರಿತ್ತು. :ಎರಡನೆಯ ಶ್ರವಣಬೆಳುಗೊಳ ಎನಿಸಿತ್ತು :

ಎ.ಕ. ೭.(೧೯೭೯) ೧೦೬ (೧೧೧ಮವ ೪೮ ) ೧೭೦೦ ಹಾಗಲಹಳ್ಳಿ .ಪು. ೩೧೯

ಅದೇ : ೧೦೨. ೧೩೯೨ ಹಾಗಲಹಳ್ಳಿ ಪು. ೩೧೭. ಸಾಲು ೧೬

ಅದೇ : ಮದ್ದೂರು ೧೧೫. ೧೧೯೭. ಬೊಪ್ಪಸಂದ್ರ.ಪು. ೩೨೬. ಸಾಲು ೧೧–೧೩.

ಅದೇ : ಮದ್ದೂರು ೫೨ (ರಿ ೧೯೪೭ ರಿಂದ ೫೬–೨೦) ಸು. ೧೧೭೦ .ಪು. ೨೮೧.

ಮುಂತಾದ ಹತ್ತಾರು ಶಾಸನಗಳಲ್ಲಿ ತೀರ್ಥದ ಮಹಿಮೆಯನ್ನು ಕಾಣುತ್ತೇವೆ. ಇದರ ನೆರೆಹೊರೆಯ ಹಾಗಲಹಳ್ಳಿ, ಅರುವನ ಹಳ್ಳಿಗಳಿಗೆ ಇದ್ದ ಪ್ರಾಚೀನ ಹೆಸರುಗಳು ತಿಪ್ಪೊರು ತೀರ್ಥದಹಳ್ಳಿ ಮತ್ತು ಅರುಹನ ಹಳ್ಳಿ ಎಂದು [ಅದೇ : ಮದ್ದೂರು ೮೯,೯೪ ಇತ್ಯಾದಿ ಶಾಸನಗಳು]. ಜತೆನೆ ಈ ಸುತ್ತಲಿನ ಊರುಗಳಲ್ಲಿ ಆಸ್ತಿಯ ವಿಭಾಗ ಮಾಡಿ ಸಾಕ್ಷಿಗಳು ಹಾಕುವಾಗ ಊರ ದೈವಗಳ ಹೆಸರುಗಳನ್ನು ಶ್ರೀವೀತರಾಗ ವೀತರಾಗ ವೀತರಾಗ ' ಎಂದು ಜೈನ ತೀರ್ಥಂಕರ ಸ್ಮರಣೆಯೊಂದಿಗೆ ಹೇಳಿರುವುದು ವಿಶೇಷ ಗಮನಿಕೆಗೆ ತಕ್ಕುದಾಗಿದೆ [ಅದೇ: ಮದ್ದೂರು ೮೯(೧೧೧ಮವ ೨೦) ೧೩೮೮.ಪು. ೩೦೭].

ಕ್ರಿ.ಶ. ೮ನೆಯ ಶತಮಾನದಿಂದ ತಿಪ್ಪೂರು ತೀರ್ಥ ಕನಕಗಿರಿತೀರ್ಥ ಮಣಲೆಂಯರ ಮನೆತನದ ಕುಲದೈವವಾಗಿತ್ತು [ನಾಗರಾಜಯ್ಯ ,ಹಂಪ., 'ಶಾಸನಗಳಲ್ಲಿ ಎರಡು ವಂಶಗಳು'

(೧೯೫೫)]. ಹೊಯ್ಸಳರಾಜ ವಿಷ್ಣುವರ್ಧನನ ಮಹಾದಂಡನಾಯಕ ಗಂಗರಾಜನು ಚೋಳರ ಅದಿಯಮನನ್ನು ಸೋಲಿಸಿದನು. ಅದಕ್ಕೆ ಪ್ರತಿಯಾಗಿ ಗಂಗರಾಜನುಈ ತಿಪ್ಪೂರು ತೀರ್ತ್ಥದ ವೃತ್ತಿಯನ್ನು ವಿಷ್ಣುವರ್ಧನನಿಂದ ಬೇಡಿಪಡೆದನು. ಇದನ್ನು ಗಂಗರಾಜನು ಅಭಿವೃದ್ಧಿ ಪಡಿಸಿ ತನ್ನ ಗುರು "ಮೂಲ ಸಂಘ ಕ್ರಾಣೂರುಗಣ ತಿಂತ್ರಿಣಕಗಚ್ಛದ ಮೇಘಚಂದ್ರ ಸಿದ್ಧಾಂತ ದೇವರ ಕಾಲಂ ಕರ್ಚ್ಚಿ ಧಾರಾಪೂರ್ಬ್ಬಕಂ ಮಾಡಿ " ದತ್ತಿ ಬಿಟ್ಟು ಕೊಟ್ಟನು [ಅದೇ :ಮದ್ದೂರು ೫೪ (೧೧೧ ಮವ ೩೧ ) ೧೧೧೭ ತಿಪ್ಪೂರ್ರುಪು. ೨೮೨ ೮೪] . ೧೨೮೪ ರಲ್ಲಿ ಹೊಯ್ಸಳ ವೀರ ನರಸಿಂಹನಿಂದ ಮಹಾಪ್ರಧಾನ ಪೆರುಮಾಳ ದಣ್ಣಾಯಕನು ತಾಮ್ರಶಾಸನ ಮೂಲಕ 'ಬೆಟ್ಟದ ಕೋಟೆ ಬಿಲ್ಲ ಬೆಳಗುಂದ ಮತ್ತು ತಿಪ್ಪೂರು ಇನ್ತೀ ಮೂಱು ಸ್ಥಳಂಗಳನೂ ಯೆಂದೆಂದಿಂಗೆವೂ ತಾವು ವೊಡೆಯರಾಗಿ ನಡಸುವಂತಾಗಿ' ಪಡೆದ ಮೇಲೆ ತಿಪ್ಪೂರತೀರ್ತ್ಥದ ಜೈನತ್ವದ ಕುರುಹುಗಳನ್ನು ನಾಶಪಡಿಸಲಾಯಿತು. [ಅದೇ: ನಾಮಂ ೭೩ (೪ ನಾಮಱ ೩೮ ) ೧೩೮೪. ಬೆಳ್ಳೂರು. ಪು. ೬೨]

೧೫. ದಾನವುಲಪಾಡು ತೀರ್ತ್ಥ [ಎ.ಆರ್.ಎಸ್.ಐ ಇ.೧೯೦೫-೦೬ .ಪು, ೧೨೦-೨೭] ಈಗಿನ ಆಂಧ್ರ ಪ್ರದೇಶದ ಕಡಪಾಜಿಲ್ಲೆಯ ಜಮ್ಮಲಮಡುಗು ತಾಲ್ಲೂಕಿಗೆ ಸೇರಿದ ಕುರುಮರ್ರಿ ದಾನವುಪಾಡು ತೀರ್ತ್ಥವು, ರಾಷ್ಟ್ರಕೂಟರ ಮುಮ್ಮಡಿ ಇಂದ್ರನ ಆಳಿಕೆಯ (೯೧೪-೨೯) ವೇಳೆಗಾಗಲೇ ತೀರ್ತ್ಥವೆನಿಸಿ ಖ್ಯಾತಿಪಡೆದಿತ್ತು. ಇಂದ್ರರಾಜನು ಶಾಂತಿನಾಥ ಜಿನರಿಗೆ ಕಲ್ಲಿನ ಪೀಠ ಮಾಡಿಸಿದನು. ಸುಪ್ರಸಿದ್ಧ್ ನಾದ ಶ್ರೀವಿಜಯ ದಂಡಾಧೀಶನು ದಾನವುಲಪಾಡು ತೀರ್ತ್ಥಕ್ಕೆ ಸೇರಿದವನು. ಇಲ್ಲಿ ಶಾಂತಿನಾಥ ಜಿನಾಲಯ ಮತ್ತು ಪಾರ್ಶ್ವನಾಥ ಜಿನಾಲಯ -ಎಂಬೆರಡು ಬಸದಿಗಳಲ್ಲದೆ ಇನ್ನೂ ಬೇರೆ ಜಿನಮಂದಿರ ಗಳಿದ್ದುವು. ದಾನವುಲಪಾಡು ಸಲ್ಲೇಖನ ಸಮಾಧಿಮರಣವರ್ಮನು ರಚಿಸಿದ ಶಾಸನವೂ ಇಲ್ಲಿದೆ. [ಎ.ಇ.೧೦, :ಐ.ಎ.ಪಿ. ಕಡಪ ೧,೧೬೮, ೯೧೫ ] ಪ್ರಾಚೀನವಾದ ಪಾಳು ಬಸದಿ ಇಂದ್ರರಾಜನ ಕಾಲದ್ದು, ಪ್ರಾಯ: ಶ್ರೀವಿಜಯ ದಂಡಾನಾಯಕ ಕಟ್ಟಿಸಿದ್ದು [ಸೌ.ಇ. ಇ.೧೦, ೨೮.೯೧೮].

೧೬. ಪೊಸವೂರ ತೀರ್ಥ: ಹೊಸೂರು ತೀರ್ಥ್;ಧಾರವಾಡ ಜಿಲ್ಲೆ ಗದಗ ತಾಲ್ಲೂಕು ಹಲವುಜೈನ ಕೇಂದ್ರ– ಕ್ಷೇತ್ರಗಳ ಕರ್ಮಭೂಮಿ:ಮುಳ್ಗುಂದ, ಸಕಲಗುಣ ಸಂಪೂರ್ಣನೂ ,ಕಲಿಕಾಲ ಕರ್ಣನೂ, ಅಮಳ ಚರಿತ್ರನೂ ಆದ ಆಯ್ಚ ಗಾವುಂಡನು ಪೊಸವೂರ ತೀರ್ಥ್ದಲ್ಲಿದ್ದನು; ಅದು ನಡುನಾಡ ತೀರ್ಥ್ವೆನಿ ಸಿತ್ತು. ಮೊರಕ ಕುಳದ ಆಯ್ಚ್ಗಾವುಣ್ಡನ ಕುಲವಧು ಕಂಚಿಯಬ್ಬೆಯು ಸೂಂಡಿಯ ಮದನಾಗ ಸೆಟ್ಟಿಯ ಮಗಳು. ಈ ದಂಪತಿಗಳ ಮಕ್ಕಳು ಮೊರಕ ಕುಳತಿಳಕರೆನಿಸಿದ್ದುರು. ಆಯ್ಚಗಾವುಂಡನು. ತನ್ನ ಹೆಂಡತಿ ಕಂಚಿಕಬ್ಬೆ ಗಾವುಂಡಿಗೆ ಪರೋಕ್ಷ ವಿನಯವಾಗಿ ಬಸದಿಯನ್ನು ಪೊಸವೂರ ತೀರ್ಥ್ದಲ್ಲಿ ಮಾಡಿಸಿದನು. ಆತನು ತನ್ನ ಹೆಂಡತಿಯ ಹೆಸರಲ್ಲಿ ಮಾಡಿಸಿದ ಹೊಸೂರ ಬಸದಿಯನ್ನು ತನ್ನ ಗುರು ನಾಗಚಂದ್ರಸಿದ್ಧಾಂತಿಯವರಿಗೆ ಕಾಲು ತೊಳೆದು ಸಮರ್ಪಿಸಿದನು ; ಪೂಜೆಗಾಗಿ ಅಡಕೆ ತೋಟವನ್ನೂ ಬಿಟ್ಟು ಕೊಟ್ಟನು [ಸೌ. ಇ.ಇ. ೧೧–೧, ೬೫. ೧೦೨೮. ಹೊಸೂರು. ಪು. ೫೫–೫೭]

೧೭. ಬಂಕಾಪುರ ತೀರ್ಥ:ಧಾರವಾಡ ಜಿಲ್ಲೆ ಶಿಗ್ಗಾಂವಿ ತಾಲ್ಲೂಕು ಬಂಕಾಪುರ ತೀರ್ಥವು ಪ್ರಾಚೀನವಾದ ಪವಿತ್ರ ಜೈನ ಕೇಂದ್ರ. ಮಹಾಪುರಾಣದ ಎರಡನೆಯ ಭಾಗವಾದ ಉತ್ತರ ಪುರಾಣವನ್ನು ಆಚಾರ್ಯಗುಣಭದ್ರರು ಬರೆದು ಪೂರೈಸಿದ್ದು ಇದೇ ತೀರ್ಥುಸ್ಥಳದಲ್ಲಿ. ಚಲ್ಲಕೇತನ ಮನೆತನ ದವರಂತೂ ಬಂಕಾಪುರವನ್ನು ಪ್ರಭಾವೀ ಜೈನಕೇಂದ್ರವಾಗಿ ಬೆಳೆಸಿದರು. ಬಂಕೇಯನ ಮಗಲೋಕಾದಿತ್ಯನು (ಲೋಕಟೆ, ಲೋಕಡೆ, ಲೊಕಯ್ಯ) ಬನವಾಸಿ ೧೨೦೦೦ ಆಳುವಾಗ ಬಂಕಾಪುರವೇ ಪ್ರಧಾನವಾಗಿತ್ತು. ಈತನೂ ಈತನ ಮೊಮ್ಮಗ ಇಮ್ಮಡಿ ಕಲಿವಿಟ್ಟ ಮತ್ತು ಮಗ ಒಂದನೆಯ ಕಲಿವಿಟ್ಟರೂ ಬಂಕಾಪುರವನ್ನು ಜಿನವಾಡಿಯಾಗಿಸಿದರು. ಈ ಎಲ್ಲ ವಿಚಾರಗಳು ವಿಸ್ತಾರವಾಗಿ ಶಾಸನಗಳಲ್ಲಿ ವರ್ಣಿತವಾಗಿವೆ. ಗಂಗಚೂಡಾಮಣಿ ನೊಳಂಬಕುಳಾಂತಕ ಮಾರಸಿಂಹನು ‘ಬಂಕಾಪುರದೊಳಜಿತಸೇನ ಭಟ್ಟಾರಕ ಶ್ರೀಪಾದಸನ್ನಿಧಿಯೊಳಾರಾಧನಾ ವಿಧಿಯಂ ಮೂಱು

ದೆವಸಂ ನೋನ್ತು ಸಮಾಧಿಯಂ ಸಾಧಿಸಿದಂ' [ಎ.ಕ. ೨, ೬೪(೫೯) ೧೦ ಶ.ಪು. ೨೩. ಸಾಲು ೧೧೯–೧೧೧] ಹುಳ್ಳರಾಜ ದಂಡಾಧಿಪನು ಬಂಕಾಪುರದಲ್ಲಿ ನಿಪ್ಪಟ ಜೀರ್ಣವಾಗಿದ್ದ ಉಪ್ಪಟಾಯ್ತನ ಮಹಾ ಜಿನೇಂದ್ರಾಲಯನ್ನು ನಿಪ್ಪೊಸತು ಮಾಡಿದನು [ಅದೇ: ೪೭೬ (೩೪೫) ೧೧೫.ಪು. ೨೮೯. ಸಾಲು: ೪೦–೪೧] ಮತ್ತೆ ಬಂಕಾಪುರದಲ್ಲಿಯೆ– [ಅದೇ: ಸಾಲು ೪೧–೪೩]

> ಕಲಿತನಮುಂ ವಿಟತ್ವಮುಮನುಳ್ಳವನಾದಿಯೊಳೊರ್ವ್ವನುರ್ವ್ವಿಯೊಳ್
> ಕಲಿವಿಟನೆಂಬತನ ಜಿನಾಲಯಮಂ ನೆಟಿಽ. ಜೀರ್ಣ್ಣಮಾದುದಂ
> ಕಲಿಸಲೆ ದಾನದೋಳ್ಪರಮಸೌಖ್ಯರ ಮಾರತಿಯೊಳ್ವಿಟಂ ವಿನಿ
> ಶ್ಚಲಮೆನಿಸಿರ್ದ್ದ ಹುಳ್ಳನದನೆತ್ತಿಸಿದಂ ರಜತಾದ್ರಿ ತುಂಗಮಂ ||

ಇತರ ಶಾಸನಗಳಲ್ಲಿ ಮುಖ್ಯವಾದುವು [ಎ.ಕ. ೭, ಶಿಕಾರಿಪುರ. ೨೧೯.೯೧೮. ಅದೇ: ಶಿಕಾರಿಪುರ ೨೨೫. ೧೨೦೩–೦೪. ಚೈ. ೩೦೨.: ಎ.ಕ. ೮–೨, ಸೊರಬ ೨೩೩. ೧೧೩೯]

೨೩. ಬಂದಳಿಕೆ ತೀರ್ಥ (ಬನ್ದನಿಕೆ, ಬಂದಣಿಕೆ, ಬಂದಳಿಗೆ, ಬಂದಣಿಗೆ): ಕರ್ನಾಟಕದ ಪ್ರಾಚೀನ ಜೈನ ತೀರ್ಥ ಕ್ಷೇತ್ರಗಳಲ್ಲಿ ಬಂದಳಿಕೆ ತೀರ್ಥವೂ ಒಂದು. ಕ್ರಿ.ಶ. ಹತ್ತನೆಯ ಶತಮಾನದ ವೇಳೆಗೆ ಇದು ಅಸ್ತಿತ್ವದಲ್ಲಿತ್ತು. ಜಕ್ಕಿಯಬ್ಬೆ ಮತ್ತು ನಾಗಾರ್ಜುನ ನಾಳ್ಗೊವುಂಡರು ನಾಗರ ಖಂಡ–೭೦ ಆಳುತ್ತಿದ್ದರು. ನಾಗಾರ್ಜುನನು ಅತೀತನಾದನು. ಜಕ್ಕಿಯಬ್ಬೆ ಕೆಲವು ಕಾಲ ನಾಳ್ಗೊವುಂಡತನ ನಡಸಿದಳು. ಕಡೆಗೆ ಕ್ರಿ.ಶ. ೯೧೨ ರಲ್ಲಿ ಬಂದನಿಕೆಯ ತೀರ್ತ್ಥದಲ್ಲಿ ಮುಡಿಪಿದಳು [ಎ.ಕ. ೭, ಶಿಕಾರಿಪುರ ೨೧೯. ೯೧೨. ಬಂದಲಿಕೆ. ಪು. ೨೯೮. ಸಾಲು ೨೨–೨೬] ಬಂಕರಸನ (ಬಂಕೇಯ) ಮಗನಾದ ಲೋಕಾದಿತ್ಯನು (ಲೋಕಡೆ, ಲೋಕಯ್ಯ) ಬಂದಳಿಕೆಯಲ್ಲಿ ಜಿನಾಲಯ ಮಾಡಿಸಿದನು.

ಉದ್ಧರೆಯ ಕನಕ ಜಿನಾಲಯವೂ [ಎ.ಕ. ೭–೨, ಸೊರಬ. ೨೩೩. ೧೧೪೯.ವುದ್ರಿ– ಉದ್ಧರೆ–ಉದ್ರಿ (ಶಿವಮೊಗ್ಗಜಿ/ಸೊರಬ ತಾ) ಆನವಟ್ಟಿ ಹೋಬಳಿ. ಪು. ೯೮.ಸಾಲು: ೫೯] ಕುಪ್ಪಟೂರಿನ ಪಾರ್ಶ್ವನಾಥ ತೀರ್ಥಂಕರ ಬ್ರಹ್ಮಜಿನಾಲಯವೂ [ಅದೇ: ಸೊರಬ, ೨೬೨.೧೦೭೫. ಪು. ೧೧೦] ಬನ್ದಣಿಕೆಯ ತೀರ್ತ್ಥದ ಪ್ರತಿಬದ್ಧ (ಅಧೀನ) ಬಸದಿಗಳಾಗಿದ್ದುವು.

ಶ್ರೀಮೂಲಸಂಘ ಕುಂದಕುಂದಾನ್ವಯ ಕಾಣೂರು ಗಣ ತಿಂತ್ರಿಣಿ (ಕ)ಚ್ಛದ ಆಚಾರ್ಯ ಪರಂಪರೆಯು ಈ ತೀರ್ಥದ ಮಹಾಮಂಡಲಾಚಾರ್ಯರಾಗಿ ಮಾರ್ಗ ದರ್ಶನ ಮಾಡಿದರು [ಎ.ಕ. ೮–೨, ಸೊರಬ ೧೪೦ (ಕ್ರಿ.ಶ. ೧೧೯೮), ೧\೨೬೨ (ಕ್ರಿ.ಶ. ೧೦೭೭), ೨೩೩ (೧೧೪೯) ೩೪೫(೧೧೭೧) ಇತ್ಯಾದಿ ಶಾಸನಾಗಳು.] ರಾಮಣಂ ದಿಬ್ರತಿಪತಿ (೧೦೫೦), ಪದ್ಮನಂದಿ ಬ್ರತಿಪತಿ (೧೦೭೭), ಮುನಿಚಂದ್ರ ಸಿದ್ಧಾಂತಿದೇವ (೧೧೦೦), ಭಾನುಕೀರ್ತಿ ಸಿದ್ಧಾಂತಿದೇವ (೧೧೨೦) ಕುಲಭೂಷಣ ಬ್ರತಿತ್ರೈವಿದ್ಯ ವಿದ್ಯಾದರ (೧೧೫೦), ಸಕಳ ಚಂದ್ರಭಟ್ಟಾರಕ ಅನ್ತಾ ಬಂದಿಣಿಕಾತೀರ್ತ್ಥಾದಿ ಸಕಳ ಚೈತ್ಯಾಲಯಕ್ಕಾಚಾರ್ಯ್ಯರುಂ ಮಂಡಳಾಚಾರ್ಯ್ಯರು ಮೆನಿಸಿದ ಪದ್ಮನನ್ದಿ ಸಿದ್ದಾಂತಿ [ಅದೇ: ಸೊರಬ. ೨೬೨. ೧೦೭೫. ಕುಪ್ಪಟೂರು, ಸಾಲು: ೨೭–೩೧] ಮತ್ತು ಭಾನುಕೀರ್ತಿ ಸಿದ್ಧಾಂತಿ ದೇವ [ಅದೇ: ಸಾಗರ ೧೫೯. ೧೧೫೯. ಹೆರಕೆರೆ. ಪು. ೩೩೧ –೩೩: ಅದೇ, ಸೊರಬ. ೨೩೩, ೧೧೪೯ ಇತ್ಯಾದಿ] ಇವರು ಬಂದಣಿಕೆ ತೀರ್ಥವನ್ನು ಅತ್ಯಂತ ಜನಪ್ರಿಯವಾಗಿಸಿದರು ಮತ್ತು ರಾಜಕೀಯ ವಲಯದಲ್ಲಿ ತುಂಬ ಪ್ಪಭಾವ ಶಾಲಿಗಳಾಗಿದ್ದರು.

೨೪. ಬಿಂಡಿಗೆನವಿಲೆ ತೀರ್ತ್ಥ:ಮಂಡ್ಯಜಿಲ್ಲೆ ನಗಮಂಗಲ ತಾಲ್ಲೂಕಿನ ಬಿಂಡಿಗೆ ನವಿಲೆ ತೀರ್ತ್ಥವೂ ಇಲ್ಲಿನ ಪಾರ್ಶ್ವನಾಥ ಬಸದಿಯೂ ೧೧–೧೨ ನೆಯ ಶತಮಾನಗಳಲ್ಲಿ ವಿಖ್ಯಾತವಾಗಿತ್ತು [ಎ.ಕ. ೭(೧೯೭೯) ನಾಮಂ ೨೬ (೪ ನಾಮಂ ೨೦) ೧೧೬೮. ಕಂಬದಹಳ್ಳಿ ಪು. ೧೭] ಮಹಾಮಂಡಳೇಶ್ವರ ಹೊಯ್ಸಳದೇವನ ಮಹಾಸಾಮಂತಾಧಿಪತಿ ಶ್ರೀಮನ್ಮಹಾಪ್ರಧಾನಿ

ದ್ರೋಹ ಘರಟ್ಟ ಪಿರಿಯ ದಂಡನಯಕ ಗಂಗರಾಜನು ತಲಕಾಡನ್ನು ಗೆದ್ದು ಕೊಟ್ಟಾಗ 'ಮೆಚ್ಚಿದೆಂ ಬೇಡಿಕೊಳ್ಳೆನೆ ಶ್ರೀ ಬಿಂಡಿಗೆ ನವಿಲೆಯ ತೀರ್ತ್ಥಕ್ಕೆ ತಳವೃತ್ತಿಯಂ ಬೇಡೆ ಶ್ರೀ ವಿಷ್ಣುವರ್ದ್ಧನ ಹೊಯ್ಸಳದೇವರು ಕಾರುಣ್ಯಂಗೆಯ್ದು' ಕೊಟ್ಟನು: ಆಗ ಗಂಗರಾಜನು ಶ್ರೀಮೂಲಸಂಘದ ದೇಸಿಗಗಣದ ಪುಸ್ಥಕ ಗಚ್ಛದ ಕೊಂಡಕುಂದಾನ್ವಯದ ಸುಭಚಂದ್ರ ಸಿದ್ಧಾನ್ತದೇವರ ಕಾಲಂಕರ್ಚ್ಚಿಧಾರಾ ಪೂರ್ವಕಂ ಮಾಡಿ ಬಿಟ್ಟ ದತ್ತಿ. [ಅದೆ: ನಾಮಂ ೩೩. ೧೧೧೮-೧೯.ಪು. ೨೨.ಸಾಲು: ೫೧-೬೦] ಇದರ ಸಂಬಂಧವಾಗಿ ಹೆಚ್ಚಿನ ವಿವರಗಳಿಗೆ 'ಕಂಬದಹಳ್ಳಿ ತೀರ್ಥ' ವನ್ನೂ ಸಹ ನೋಡಬಹುದು.

ಬೆಳ್ಗೊಳ ತೀರ್ತ್ಥ (ಕಟ್ವಪ್ಪು ತೀರ್ತ್ಥ, ಗೊಮ್ಮಟದೇವರ ತೀರ್ತ್ಥ): ಕರ್ನಾಟಕದ ಪ್ರಾಚೀನತಮ ಜೈನ ತೀರ್ತ್ಥ ಕ್ಷೇತ್ರಗಳೆಂದರೆ ಶ್ರವಣ ಬೆಳುಗೊಳ ಮತ್ತು ಕೊಪಣಾಚಲ. ಇವೆರಡೂ ಕ್ರಿ.ಪೂ. ದಿಂದಲೂ ಪ್ರಸಿದ್ಧಿ ಪಡೆದ ಎಡೆಗಳು. ಕಟ್ವಪ್ಪು ತೀರ್ತ್ಥವು ಶ್ರವಣ ಬೆಳುಗೊಳದ ಚಿಕ್ಕಬೆಟ್ಟ, ಗೊಮ್ಮಟ ದೇವರ ತೀರ್ಥವೆಂದರೆ ಅಲ್ಲಿನ ದೊಡ್ಡ ಬೆಟ್ಟ. ಬೆಳ್ಗೊಳ ತೀರ್ತ್ಥವೆಂದರೆ ಎರಡು ಬೆಟ್ಟಗಳ ಕೆಳಗಿನ ಊರು. ಭಂಡಾರಿ ಹುಳ್ಳಚಮೂಪನು. ಜಗನ್ನುತವಾದ 'ಈ ವರ ಬೆಳ್ಗುಳ ತೀರ್ತ್ಥ ದೊಳ್ ಚತುರ್ವ್ವಿಂ ಶತೀ ತೀರ್ತ್ಥ ಕೃನ್ನಿಳಯಮಂ ನೆಱ ಮಾಡಿಸಿದಂ ದಲಿನ್ನಿದಂ' [ಎ.ಕ.೨, ೪೭೬ (೩೪೫) ೧೧೫೯.ಪು. ೨೯೦. ಸಾಲು: ೪೯-೫೦.] ಸಮ್ಯಕ್ತ್ವ ಚೂಡಾಮಣಿಯೂ ಆಹಾರ ಅಭಯ ಭೈಷಜ್ಯ ಶಾಸ್ತ್ರದಾನ ವಿನೋದೆಯೂ ಆದ ವಿಷ್ಣುವರ್ಧನ ಪೊಯ್ಸಳ ದೇವರ ಪಿರಿಯರಸಿ ಪಟ್ಟಮಹಾದೇವಿ ಶಾಂತಲದೇವಿಯು 'ಶ್ರೀ ಬೆಳ್ಗೊಳ ತೀರ್ತ್ಥದೊಳ್ ಸವತಿ ಗಂಧವಾರಣ ಜಿನಾಲಯಮಂ ಮಾಡಿಸಿ... ಮೇಘ ಚಂದ್ರ ತ್ರೈವಿದ್ಯ ದೇವರ ಶಿಷ್ಯರಪ್ಪ ಪ್ರಭಾಚಂದ್ರ ಸಿದ್ಧನ್ತದೇವರ್ಗ್ಗೆ ಪಾದ ಪ್ರಕ್ಷಾಳನಂ ಮಾಡಿ ಸರ್ಬ್ಬ ಬಾಧಾ ಪರಿಹಾರವಾಗಿ ಬಿಟ್ಟ ದತ್ತಿಯನ್ನು ಶಾಸನ ಸಾರುತ್ತಿದೆ [ಅದೇ: ೧೭೬ (೧೪೩) ೧೧೨೩.ವು. ೧೩೪-೩೫ ಸಾಲು : ೨೦೩-೦೬ ಮತ್ತು ೨೧೫-೧೭] ಈ ವಿಷಯವನ್ನು ಇನ್ನೊಂದು ಶಾಸನವೂ ಪುಷ್ಟೀಕರಿಸಿ ಸ್ಥಿರೀಕರಿಸಿದೆ [ಅದೇ: ೧೬೨ (೧೩೨) ೧೧೨೩.ಪು. ೧೦೫. ಸಾಲು: ೩೯-೪೬]. ಮಹಾನ್ ದಂಡನಾಯಕ

ಗಂಗರಾಜನ ತಾಯಿ ಪೋಚಾಂಬಿಕೆಯು ಬೆಳ್ಗೊಳದ ತೀರ್ತ್ಥಂ ಮೊದಲಾಗನೇಕ ತಿರ್ತ್ಥಗಳೊಳು ಪಲವುಂ ಚೈತ್ಯಾಲಯಂಗಳ ಮಾಡಿಸಿ ಮಹಾದಾನಗೆಯ್ದು' ದನ್ನು ಒಂದು  ಶಾಸನ ನಮೂದಿಸಿದೆ [ಅದೇ: ೧೫೬ (೧೧೮) ೧೧೨೦.ಪು. ೮೪. ಸಾಲು: ೨೭-೨೯].

ಬೋಧನ ತೀರ್ತ್ಥ [ಪೋದನ ತೀರ್ತ್ಥ: ಆಂಧ್ರದ ನಿಜಾಮಾಬಾದು ಜಿಲ್ಲೆ] ರಾಷ್ಟ್ರಕೂಟರ ಮುಮ್ಮಡಿ ಇಂದ್ರನ ಆಳಕೆಗೂ (೯೧೪-೨೭) ಮುನ್ನ ಬೋಧನವು ಜೈನ ತೀರ್ತ್ಥ ಕ್ಷೇತ್ರವಾಗಿತ್ತು. ಜೈನ ಆಗಮ ಸಾಹಿತ್ಯದಲ್ಲೂ, ಪುರಾಣಗಳಲ್ಲೂ ಇದು ಆದಿಜಿನ ತನಯ ಬಾಹುಬಲಿಯ ರಾಜಧಾನಿಯೆಂದು, ಪೌದನಪುರವೆಂಬ ಹೆಸರಿನಿಂದ ಮಾನ್ಯತೆ ಹೊಂದಿದೆ; ಬಾಹುಬಲಿಯ ರಾಜಧಾನಿ ತಕ್ಷಶಿಲೆಯೆಂದೂ ಹೇಳಿದೆ. ಬಾಹುಬಲಿಯ ಅಣ್ಣ ಭರತನು ಇಲ್ಲಿ ೫೨೫ ಧನಸ್ಸು ಎತ್ತರದ ಬಾಹುಬಲಿ ಮೂರ್ತಿಯನ್ನು ಮಾಡಿಸಿದನೆಂದು (ಕವಿ ಬೊಪ್ಪಣ ಪಂಡಿತ ವಿರಚಿತ) ಶ್ರವಣ ಬೆಳುಗೊಳ ಶಾಸನದಲ್ಲಿದೆ [ಎ.ಕ. ೨, (೨೩೪) ೧೨ ಶ. ಪು. ೧೮೬. ಸಾಲು: ೬-೮]

ಮಂಡಳಿ (ಲಿ) ತೀರ್ತ್ಥ: ಶಿವಮೊಗ್ಗ ನಗರಕ್ಕೆ ಸಮೀಪದಲ್ಲಿಯೇ ಆಗಿಹೋದ ಬಹುದೊಡ್ಡ ಜೈನ ತೀರ್ತ್ಥ ಕ್ಷೇತ್ರವಿದು.  ಮೂಲಸಂಘ ಕಾನೂರುಗಣ ತಿಂತ್ರಿಣಿ ಗಚ್ಛದ ಆಚಾರ್ಯಪರಂಪರೆಗೆ ಸೇರಿದ ಈ ಮಂಡಲಿ ತೀರ್ಥವು ಗಂಗರ ಕಾಲದಿಂದಲೂ ಪ್ರಸಿದ್ಧಿ ಪಡೆದಿದೆ. ಒಬ್ಬರಾದ ಮೇಲೆ ಒಬ್ಬರಂತೆ ನಿರಂತರವಾಗಿ ಸುಮಾರು ಒಂದು ಸಾವಿರ ವರ್ಷ ಮಂಡಳಿ ತೀರ್ತ್ಥವನ್ನು, ಅದರ ಹಿರಿಮೆಯನ್ನು ಗತವೈಭವವನ್ನು ಉಳಿಸಿಕೊಳ್ಳಲು ಆಗಲಿಲ್ಲ.  ಗಂಗರು ನಂದಗಿರಿ ಕುವಳಾಲ ಮಂಣೆ ಶ್ರೀಪುರ ನಿರ್ಗುಂದ ಸಿವಗಂಗೆ ತೀರ್ತ್ಥಗಳನ್ನು ಜಿನವಾಡಿಯನ್ನಾಗಿಸಿದ್ದರು. ಈ ಅವಧಿಯಲ್ಲಿಯೇ ಮಂಡಳಿ ಸಾಸಿರ ಮತ್ತು ಸಾಂತಳಿಗೆ ಸಾಸಿರವನ್ನೂ ಬಸದಿಗಳ ಬೀಡನ್ನಾಗಿ ಮಾಡಿದ್ದರು. ರಾಷ್ಟ್ರಕೂಟರು ಚಾಳುಕ್ಯರಿಂದ ಸೋತರು, ಶರಣಾದರು, ಗಂಗರೂ ಸೋತರು.  ಆದರೆ ಗಂಗರು ನಿರ್ನಾಮವಾಗಲಿಲ್ಲ.  ಚಾಳುಕ್ಯರಲ್ಲೂ, ಅನಂತರ ಹೊಯ್ಸಳರಲ್ಲೂ ಆಸರೆ ಪಡೆದು ಉಸಿರಾಡಿದರು. ಈ ಅವಧಿಯಲ್ಲಿ ಅವರು ಇಡೀ ಶಿವಮೊಗ್ಗ, ಜಿಲ್ಲೆಯಲ್ಲಿ, ಅದರಲ್ಲಿಯೂ ಮುಖ್ಯವಾಗಿ ಸೊರಬ,

ಸಾಗರ, ಹೊಸನಗರ, ತೀರ್ಥಹಳ್ಳಿ-ಈ ತಾಲ್ಲೂಕುಗಳ ಸುತ್ತ ಮುತ್ತ ವಸತಿ ಮಾಡಿದರು. ಮಂಡಲಿಸಾಸಿರ ಮತ್ತು ಶಿವಮೊಗ್ಗ ಜಿಲ್ಲೆಯಲ್ಲಿ ಹಳೆಯ ಬಸದಿಗಳನ್ನು ಪುನರ್ಭರಣಿಸಿದರು, ಹೊಸ ಜಿನಮಂತಿರಗಳನ್ನು ಕಟ್ಟಿಸಿದರು.

ಕೊಪಣ, ಕಳ್ವಪ್ಪು ತೀರ್ತ್ಥಗಳಂತೆ ಮಂಡಲಿ ತೀರ್ತ್ಥದ ಮಾಹಿತಿಗಳು ಚಾರಿತ್ರಿಕ ಮಹತ್ವದಿಂದ ಕೂಡಿವೆ. ಮಂಡಲಿ ತೀರ್ತ್ಥ ಕುರಿತ ಅಧ್ಯಯನಕ್ಕೆ ಶಾಸನ ಸಂಪತ್ತಿದೆ. ಇದನ್ನು ಆಧರಿಸಿ ವಿಸ್ತಾರವಾದ ಪ್ರತ್ಯೇಕ ಅಧ್ಯಯನ ಅಗತ್ಯವಿದೆ, ಅವಕಾಶವಿದೆ; ಇಲ್ಲಿ ಸಂಕ್ಷೇಪ ರೂಪದಲ್ಲಿ ಆ ಮಾಹಿತಿ ಭಂಡಾರದತ್ತ ತೋರು ಬೆರಳನ್ನು ತಿರುಗಿಸಿದ್ದೇನೆ. ಮಂಡಲಿ ತೀರ್ತ್ಥದ ವಿಶೇಷ ನೆರವಾಗುವ ಶಾಸನ ಸಾಮಗ್ರಿ:

೧. ಮಂಡಲಿಯ ತೀರ್ತ್ಥದ ಪಟ್ಟದ ಬಸದಿಯ ಮಂಡಲಿಯ ಬೆಟ್ಟದ ಮೇಲಿತ್ತು. ಮುನ್ನಂ ಧಡಿಗ ಮಾಧವರು ಮಾಡಿಸಿದ ಈ ಪಟ್ಟದ ಬಸದಿಯನ್ನು ತದನತರ ಮರವೆಸನಾಗಿ ಮಾಡಿಸಲಾಯಿತು; ಮುಂದೆ ಮತ್ತೆ ಇದನ್ನು ಕಲುವೆಸನಾಗಿ ಮಾಡಿಸಿದರು. ಗಂಗನ್ವಯದವರು ಪಡಿಸಲಿಸುತ್ತ ಬಂದ ಮಂಡಲಿ ತೀರ್ತ್ಥವೆಂದರೆ ಶಿವಮೂಗ್ಗ ಹೋಬಳಿ ಕಲ್ಲೂರು ಗುಡ್ಡದ ಸಿದ್ಧೇಶ್ವರ ದೇವಾಲಯ. ಜೈನತ್ವದಿಂದ ವೀರಶೈವರ ಮಡಿಲಿಗೆ ಮತಾಂತರವಾಯಿತು. [ಎ.ಕ.೭, ಶಿವಮೊಗ್ಗ. ೪.೧೧೨೨. ಪು. ೧೦-೧೫: ಅದೇ, ಶಿವಮೊಗ್ಗ ೬.೧೦೬೦. ಹರೆಕೆರೆ. ಪು. ೧೮-೧೯]

೨. ಇತರ ಪೂರಕ ಮಾಹಿತಿ ಇರುವ ಶಾಸನಗಳಿವು.

ಅದೇ : ಶಿವಮೊಗ್ಗ ೯೬,೯೨೪, (ಅತೇದಿ)

ಶಿವಮೊಗ್ಗ ೧೦.೧೦.೧೦೮೫

೩೯.೧೧೨೨;೫೧.೧೧೦೮; ೯೭.೧೧೧೩

ಎ.ಕ. ೮-೧, ಸೊರಬ. ೧೪೦. ೧೧೯೮.

ಅದೇ : ಸೊರಬ ೨೩೩. ೧೧೩೯.

೨೮. ಮುಕ್ಕಂದತೀರ್ತ್ಥ (ಮುಕ್ಕಂದ, ಮುಗುಂದ, ಮುಗುದ, ಮುಗದ): ಧಾರವಾಡ ಜಿಲ್ಲೆ ಮತ್ತು ತಾಲ್ಲೂಕಿಗೆ ಸೇರಿದ ಮುಕ್ಕುಂದ ತೀರ್ಥವು ಸಮ್ಯಕ್ತ್ವ ರತ್ನಾಕರ ಚೈತ್ಯಾಲಯವೂ, ಆದಿನಾಥ ಮಂದಿರವೂ ಇದ್ದ ಜೈನ ಕೇಂದ್ರ .ಸಕಲ (ಪ) ಹಲಸಿಗೆ ಪನ್ನಿರ್ಚ್ಛಸಿರದೊಳಗೆ ಮಹಾರಾಜವಾಡಿ ನಾನೆಂಬುದು ಭೂಲಲನಾಲಪನಂ + ಅದಕ್ಕೆ ತಿಲಕಮೆನಿಪುದು ಮುಗುದ ಮೂವತ್ತು [ಸೌ. ಇ. ಇ. ೧೧-೧, ೧೭೭,೧೧೨೫. ಮುಗದ. ಸಾಲು೧೩-೧೪]. ಸಮಸ್ತಪ್ರಶಸ್ತಿ ಸಮೇತನಾದ ನಾಗರ್ಗಾವುಂಡ ಚಾವುಡಂನ ಮಗ ನಗದೇವ (ಪೊಲ್ಲಿಯಕ್ಕ) ನ ಮಕ್ಕಳು ಮಹಾಸಾಮಂತ ಮಾರ್ತಂಡ (ಗೊಜ್ಜಯಕ್ಕ) ಮತ್ತು ಚಾವುಂಡರಾಯ. ಮಾರ್ತಂಡನ ಮಗ ನಾಗ (ಕ) ರಸ ಮತ್ತು ಚಾವುಂಡರಾಯನ ಮಗ ಬಮ್ಮರಸ (ಬಮ್ಮದೇವ )-ಇವರಿಬ್ಬರೂ ಮಹಾಸಾಮಂತರು,ಪ್ರಭಾವಿಗಳು ಮತ್ತು ಸಮ್ಯಕ್ತ್ವ ರತ್ನಾಕರರು. ಚಾವುಂಡಗಾವುಂಡನು ಮುಕ್ಕುಂದ ತೀರ್ತ್ಥದಲ್ಲಿ 'ಸಮ್ಯಕ್ತ್ವ ರತ್ನಾಕಕರ ' ಎಂಬ ಹೆಸರಿನ ಚೈತ್ಯಳಯವನು ಹತ್ತನೆಯ ಶತಮಾನದಲ್ಲಿ ಸು. ಕ್ರಿ.ಶ. ೯೬೦ ರಲ್ಲಿ ಮಾಡಿಸಿದನು. ಆಗ ಅಲ್ಲಿ 'ಪಿರಿಯ ಗೋವರ್ಧನದೇವ' ಎಂಬ ಆಚಾರ್ಯರು ಪ್ರಾಧಾನರಾಗಿದ್ದರು, ಅವರು ಚಾವುಂಡ ಗಾವುಂಡನು ನೀಡಿದ ಭೂಮಿದಾನವನ್ನು ಪಡೆದರು. ಮುಂದೆ ಕ್ರಿ.ಶ. ೧೦೪೫ ರಲ್ಲಿ ಚವುಂಡ ಗಾವುಂಡನು ಬಬ್ಬ ಮೊಮ್ಮಗನಾದ ಮಹಾಸಾಮಂತ ಮಾರ್ತಂಡಯ್ಯನು ತನ್ನ ಮುತ್ತಯ್ಯ ಮಾಡಿಸಿದ ಬಸದಿಗೆ ಪಡಿಸಲಿಸಿದನು; ಅಷ್ಟೇ ಅಲ್ಲದೆ ನಾಟಕ ಶಾಲೆಯನ್ನು ಸಹ ಮಾಡಿಸಿ ತನ್ನ ಕೀರ್ತಿಶಿಲಾ ಸ್ತಂಭವನು ಆಚಂದ್ರಾರ್ಕತಾರಂಬರಂ ನಿಲ್ಲಿಸಿದನು [ಸೌ. ಇ.ಇ. ೧೧-೧,೭೮. ಮುಗದ. ೧೦೪೫.ಪು, ೭೧-೭೨]. ಈ ನಾಟಕ ಶಾಲೆಯನ್ನು ನಿರ್ಮಿಸಿದ್ದು ಗಮನಿಸ ಬೇಕಾದ ಅಂಶ. ತೀರ್ಥ ಕ್ಷೇತ್ರದಲ್ಲಿ ಅಂಗರಂಗ ಸೇವೆಗಳಲ್ಲಿ ಸಂಗೀತ ನಾಟಕ ನೃತ್ಯಗಳ ಮೂಲಕ ಮಾಡುವ

ಕಲಾರಾಧನೆಯೂ ಒಂದು ಪ್ರಮುಖ ಅಂಗ. ಬಸದಿಗಳಲ್ಲಿ ಧಾರ್ಮಿಕ ಆಚರಣೆ ಭಾಗವಾಗಿ ಕಲಾತ್ಮಕ ಅಭಿನಯ ಆಚರಣೆಗಳೂ ಸೇರಿದ್ದುವು. ಭಂಡಾರಿ ಹುಳ್ಳಚಮೂಪನು ಬಸದಿಯ ಸುತ್ತ ಇರುವ ಪ್ರಾಕಾರದಲ್ಲಿ ನೃತ್ಯಗೇಹ ಸಹ ಮಾಡಿಸಿದ್ದುಂಟು ಶ್ರವಣ ಬೆಳಗೊಳದಲ್ಲಿ [ಎ.ಕ. ೨, ೪೭೬ (೩೪೫) ೧೧೫೯.ಪು. ೨೯೦]

೨೯. ಮುಳ್ಗುಂದ ತೀರ್ತ್ಥ: ಧಾರವಾಡ ಜಿಲ್ಲೆಯಲ್ಲೇ (ಗದಗ ತಾ) ಅಲ್ಲದೆ ಇಡೀ ಕರ್ನಾಟಕದಲ್ಲಿಯೇ ಪ್ರಾಚೀನವೂ ಮಹತ್ವದ್ದೂ ಆದ ಜೈನ ಕ್ಷೇತ್ರಗಳಲ್ಲಿ ಮುಳ್ಗುಂದ ತೀರ್ತ್ಥವೂ ಒಂದು (ಮುಳುಗುಂದ, ಮುಳುಗುಂದ ಮುಳ್ಗುಂದ, ಮಲುಗುಂದ) ಕ್ರಿ.ಶ. ೯–೧೦ ನೆಯ ಶತಮಾನದ ವೇಳೆಗಾಗಲೇ ಅದು ಜೈನಕೇಂದ್ರವಾಗಿತ್ತು[ಎ.ಇ.೮, ೧೯೨. ಸಾಲು: ೪]:ಚಾವುಂಡರಾಯ ಪುರಾಣಂ :ಸೌ.ಇ.ಇ.೧೧–೧, ೪೭. ೯೯೪. ಸಾಲು : ೧೧. :ಎ. ಇ. ೨೬. ೪.೯೦೬ ಎ.ಕ. ೧೧.೧೧೩.೯೯೨. ದಾವಣಗೆರೆ]. ಮುಳ್ಗುಂದವು ಚತುರ್ಯುಗದ ಪಟ್ಟಣಂ ಶ್ರೀಮದ್ರಾಜಧಾನಿ [ಸೌ.ಇ.ಇ. ೫೧೧೫, ೪೦. ಪು. ೫೨] ಎಂದೂ, ದ್ವಾಪರೆ ಮುಳ್ಗಗುಂದಂ ಕಲಿಯುಗ ರಮ್ಯಂ 1ಅನ್ತಾ ನಾಲ್ಕುಯುಗದೊಳ ಪ್ರಸಿದ್ಧಮಾಗಿ ನೆಗದ್ರ್ದಾದಿಪಟ್ಟಣ ಮುಳುಗುನ್ದ ಎಂದೂ [ಸೌ.ಇ.ಇ.೧೧–೧, ೯೭.೧೦೬೨] ಶಾಸನೋಕ್ತವಾಗಿದೆ. ಮಹಾಪುರಾಣ, ನಾಗಕುಮಾರ ಕಾವ್ಯಗಳ ಖ್ಯಾತಿಯ ಮಲ್ಲಿಷೇಣ ಸೂರಿ [೧೦೫೦] ಮುಳ್ಗುಂದ ತೀರ್ಥ ಮಹಿಮೆಯನ್ನು ಸಾರಿದಾನೆ. ಮುಳ್ಗುಂದ ತೀರ್ತ್ಥದ ಬಸದಿಯನ್ನು ಸಹ ಶಾಸನ ಹೆಸರಿಸಿದೆ. [ಎ.ಇ. ೧೬,ಪು. ೫೬] .ನಯಸೇನಕವಿ (೧೧೧೨) ಧರ್ಮಾಮೃತ ಕಾವ್ಯವನ್ನು ರಚಿಸಿದ್ದು ಮುಳ್ಗುಂದ ತೀರ್ತ್ಥದಲೇ. ಮುಳ್ಗುಂದ ನಗರದಲ್ಲಿ ಜಿನೋನ್ನತ ಭವನವಿದ್ದು ಚಂದ್ರಿಕವಾಟದ ಸೇನಾನ್ವಯ ಕುಮಾರಸೇನ ಕುಮಾರಸೇನ ಮುನಿಯನು ಶಾಸನ ಸ್ಮರಿಸಿದೆ [ಜೆ.ಬಿ.ಬಿ.ಆರ್.ಎಸ್. ೩೦ ಸಂ ೧೦. ೧ ೧೮೭೪, ಕ್ರಿ.ಶ. ೯೦೨ ,ಪು. ೧೯೦–೯೧]

೩೦. ಮೈದುವೊಳಲ ದಿವ್ಯ ತೀರ್ತ್ಥ: ತುಮಕೂರು ಜಿಲ್ಲೆ ಮತ್ತು ತಾಲ್ಲೂಕಿನಲ್ಲಿರುವ ಇಂದಿನ ಮಂದಗಿರಿ ಬಿಟ್ಟವೇ ಹಿಂದಿನ ಮೃದುವೂಳಲ ದಿವ್ಯ ತೀರ್ತ್ಥ.ಮೈದುವೂಳಲು ಎಂಬ ಪ್ರಾಚೀನ ರೂಪವು ಮೈದಾಳ ಎಂದು ಬದಲಾವಣೆ ಪಡೆದಿದೆ. ನಾಕಿಸ್ವೆಟ್ಟಿ–ನಾಗವೆ ದಂಪತಿಗಳ ಮಗ ಸಾಹಣ ಬಿಟ್ಟಿಗಾಂಕ. ಚಂದಿಕಬ್ಬೆ (ಚಂದವೆ) ದಂಪತಿಗಳ ಮಗಳು ಮಾಚಿಯಕ್ಕ .ಈಕೆಯ ಪತಿ ಈಶ್ವರ ಚಮೂಪತಿ. ಈತನು ಮಾಹಾಪ್ರದಾನ, ಸರ್ವಾಧಿಕಾರಿ ಮತ್ತು ದಂಡನಾಯಕನಾದ ಎಱೆಯಂಗಮಯ್ಯನ ಆಶ್ರಯ ದಲ್ಲಿದ್ದ್ನ. ಮಾಚಿಯಕ್ಕ ಅನೂನಗೂಣರತ್ನ ಮಂಡನೆ ಮತ್ತು ಚಾತುರ್ವಣಸಮುದಾಯಕ್ಕೆ ಆಶ್ರಯದಾತೆ. ಈಕೆ ಹನೊಂದನೆಯ ಶತಮಾನದ ವೇಳೆಗ ಹೆಸರುವಾಸಿ ಆಗಿದ್ದ 'ಮೈದುವೂಳಲು ದಿವ್ಯ ತೀರ್ತ್ಥ'ದಲ್ಲಿ ಸದ್ದರ್ಮಾಪೇಕ್ಷೆಯಿಂದ ಜಿನಮಂದಿರವನ್ನು ಮಾಡಿಸಿದಳು. ಬಸದಿ ಮಡಿಸುರವುದರ ಸದ್ಧರ್ಮಾಪೇಕ್ಷೇಯಿಂದ ಜಿನಮಂದಿರವನ್ನು ಮಾಡಿಸಿದಳು .ಬಸದಿ ಮಡಿಸುವುದರ ಜತೆಗೆ ಬಸದಿಯು ಸಮೀಪದಲ್ಲಿ 'ಪದ್ಮಾವತಿ ಕೆಱೆ' ಯನ್ನೂ ಜಿನಶಾಸನ ದೇವಿಯ ಹೆಸರಲ್ಲಿ ಕಟ್ಟಿಸಿ ಆತೀರ್ತದ ಬಸದಿಗೂ, ತೀರ್ತ್ಥದ ಬೆಟ್ಟಕ್ಕೂ ದಾನವಾಗಿ ಬಿಟ್ಟು ಕೊಟ್ಟಳು [ಎ.ಕ. ೧೨, ತುಂಕೂರು.೩೮.೧೧೬೦]. ಇಂದಿಗೂ ಆ. ಬೆಟ್ಟದ ತೀರ್ಥವೂ, ಕೆರೆಯೂ ಇದೆ ;ಪದ್ಮಾ ವತಿಕೆರೆಯ ಹೆಸರು ಮೈದಾಳದ ಕೆರೆ ಎಂದು ರೂಢಿಯಲ್ಲಿದೆ. ಇಲ್ಲಿ ತುಮಕೂರಿನ ಜೈನ ಸಮಾಜದವರು ಪ್ರತಿವರ್ಷ ಪೂಜೆ ಉತ್ಸವಗಳನ್ನು ಏರ್ಪಡಿಸುತ್ತಾರೆ.

೩.೧ ಮೈಳಾಪತೀರ್ತ್ಥ: ಬೆಳಗಾವಿಜಿಲ್ಲೆಯ ತಾಲ್ಲೂಕು ಕೇಂದ್ರದ ಸೈದತ್ತಿಯಲ್ಲಿ ಇರುವ ಎಲ್ಲಮ್ಮನು ಗುಡ್ಡವೇ ಸುಮಾರು ಮುನ್ನೂರು–ನಾನ್ನೂರು ವರ್ಷಕಾಲ ಜೈನ ಪವಿತ್ರ ತೀರ್ತ್ಥ ಕ್ಷೇತ್ರವಾಗಿ ವಿಜೃಂಭಿಸಿದ ಮೈಳಾಪ ತೀರ್ತ್ಥ.ಇದನ್ನು ಬ್ರಹ್ಮಶಿವಕವಿಯು ಸಮಯ ಪರೀಕ್ಷೆ ಕಾವ್ಯದಲ್ಲಿ:

ಧರೆಯೊಳ ಮುಟ್ಟದೆ ನೆಗೆದಂ
ತರಿಕ್ಷದೊಳೆಲಸಿ ನಿಂದ ಮೈಳಾಪ ಜಿನೇ
ಶ್ವರ ತೀರ್ತ್ಥದತಿಶಯಮನಾ

ಧರಣೇಂದ್ರಂ ಪೊಗಱಲಱಿಯನುಳಿದವರಳವೇ ॥ ೨–೪೭

ಎಂಬುದಾಗಿ ಶ್ಲಾಘಿಸಿದ್ದಾನೆ. ರಟ್ಟರ ಪಟ್ಟ ಜಿನಾಲಯ ಇದ್ದದ್ದೂ ಮೈಳಾಪ ತೀರ್ಥ್ಥದಲ್ಲಿಯೇ. ಜೈನ ಸನ್ಯಾಸಿಗಳಾದ ಸವಣರಿಗೆ ದತ್ತಿಯಾಗಿ ಕೊಡಲಾದ ಸ್ಥಳ ಈ 'ಸವಣದತ್ತಿ' ಸವಣದತ್ತಿ ಎಂಬ ಈ ಶಬ್ದವು ಜನರ ಉಚ್ಚಾರಾನುಗುಣವಾಗಿ ಸವಂದತ್ತಿ–ಸೌಂದತ್ತಿ–ಸೌದತ್ತಿ ಎಂದಾಗಿದೆ. ರಾಷ್ಟ್ರಕೂಟರಜರಿಗೆ ಸೌದತ್ತಿಯ ಮೈಳಾಪತೀರ್ಥ್ಥವು ಶತಮಾನಗಳವರೆಗೆ ಮನೇದೇವರೂ, ಮನೆದೇಗಲುವೂ ಆಗಿ ಬೆಳೆಯಿತು. ಇದು ಬೆಳ್ವೊಲ (ಧವಳ) ವಿಷಯಕ್ಕೆ ಸೇರಿತ್ತು. ಮೈಳಾಪ ತೀರ್ಥ್ಥದ ಮಹಿಮೆ, ಬಸದಿಗಳು. ಆಚಾರ್ಯ ಪರಂಪರೆ ,ದಾನದತ್ತಿಗಳು ಭಕ್ತಿಯಿಂದ ಕೊಡುಗೆಗಳನ್ನು ನೀಡಿದ ರಾಜ ರಾಣಿಯರು–ಇವೆಲ್ಲ ವಿವರಗಳೂ ಶಾಸನಗಳಲ್ಲಿ ನಮೂದಾಗಿದೆ.[ಜೆ.ಬಿ. ಬಿ. ಆರ್.ಎ ಎಸ. ೩೦, ಸಂ ೨ ಕ್ರಿ.ಶ. ೮೭೬,ಪು ೧೯೪ ,ಸಾಲು೪.:ಸೌ.ಇ..೧೫, ೫೩೦.೧೦೫೯. ಮೊರಬ (ಧಾಜಿ/ಮೊರಬತಾ).; ಸೌ.ಇ.ಇ. ೨೦,೧೩.೧೩ ೮೭೫–೭೬. ಸವದತ್ತಿ :ಎ.ಇ.೬.೫೫. ೧೦೫೩: ಸೌ. ಇ.ಇ.ಇ. ೮, ೭೧.೧೦೬೬.: ಕ.ಇ.೬೬೮.೧೨೦೩ ಇತ್ಯಾದಿ ] ಮೈಳಾಪತೀರ್ಥ್ಥ: ಶಾಸನಗಳ ಆಧಾರ'ಎಂಬ ಸಂಪ್ರಬಂಧವನ್ನು ನೋಡಬಹುದು [ಹಂಪ.ನಾಟ್ಗರಾಜಯ್, 'ಸಮ್ಮಿಲನ' (ಸಂ) ಡಾ.ಎಂ. ಎ.ಜಯಚಂದ್ರ(೧೯೯೪),ಪು. ೧೭–೨೦]

೩೧. ವೃಷಭಗಿರಿ ತೀರ್ಥ್ಥ: ಕನ್ನಡ ಅದಿಕವಿ ಪಂಪನ ತಮ್ಮನಾದ ಜಿನವಲ್ಲಭನು ರಚಿಸಿದ ಗಂಗಾಧರಂ ಶಾಸನ ಸುಪ್ರಸಿದ್ಧ್ಧಗಿದ್ದು ಅದರಲ್ಲಿಯೇ ವೃಷಭರಿ ತೀರ್ಥ್ಥದ ಪ್ರಸ್ತಾವಿದೆ. ಈಗಿನ ಆಂಧ್ರಪದೇಶದ ಕುರ್ಕ್ಯಾಲಗ್ರಾಮದ ಹತ್ತಿರ ಇರುವ ಬೊಮ್ಮಲಗುವೇ ವೃಷಭಗಿರಿಯೆಂಬ :' ಸಬ್ಬಿನಾಡ ನಟ್ಟ ನಡುವಣ ಧರ್ಮ್ಮಪುರದ +ಉತ್ತರ ದಿಗ್ಬಾಗದ ವೃಶಭಗೆರಿಯೆಂಬ +ಅನಾದಿ ಸಂಸಿದ್ಧ್ಧ ತೀರ್ಥ್ಥದ ದಕ್ಷಿಣ ದಿಶಾಭಾಗದೀ ಸಿದ್ದ್ದ ಶಿಲೆಯೊಳ್ಯಮ್ಮ ಕುಲದ್ರುವಮಾದ್ಯನ್ತ ಜಿನಬಿಂಬಗಳುಮಂ ದಿಶಾಭಗದೀ ಸಿದ್ಧ ಶಿಲೆಯೊಳ್ಯಮ್ಮ ಕುಲದೈವಮಾದ್ಯನ್ತ ಜಿನಬಿಂಬಗಳು ಮಂ ಚಕ್ರೇಶ್ವರಿಯುಮಂ ಪೆಱವುಂ ಜಿನ

ಪ್ರತಿಮೆಗಳುಮಂ ತ್ರಿಭುವನ ತಿಲಕಮೆಂಬ ಬಸದಿಯುಮಂ ಕವಿತಾಗುಣಾರ್ಣ್ಣವಮೆಂಬ ಕೆಱಿಯುಮಂ ಮದನ ವಿಳಾಸಮೆಂಬ ಬನಮುಮಂ ಮಾಡಿಸಿದಂ '[iAP.ಕರೀಂನಗರ೩.] ವೃಷಭಗಿರಿತೀರ್ತ್ಥವು 'ಅನಾದಿ ಸಂಸಿದ್ಧ್ ತೀರ್ತ್ಥ' ವೆಂದು ಹತ್ತನೆಯ ಶತಮಾನದ ಈಶಾಸನವೇ ಹೇಳಿರೆ ಬೇಕಾದರೆ ಅದಕ್ಕಿಂತಲ್ಲೂ ೨-ಶ. ಹಿಂದಿನಿಂದಲೂ ಅದು ಪ್ರಸಿದ್ಧಿ ಪಡೆದಿರಬೇಕು. ಸು.ಕ್ರಿಶ. ೯೫೦ ರಲ್ಲಿ ಜಿನವಲ್ಲಭನು ಇಲ್ಲಿ 'ತ್ರಿಭುವನ ತಿಲಕ'ವೆಂಬ ಬಸದಿಯನ್ನೂ,ಕೆರೆ ಮತ್ತು ಆರವೆ (ಬನ-ತೋಟ) ಗಳನ್ನು ಮಾಡಿಸುವುದರ ಮೂಲಕ ಜೈನ ಶ್ರಾವಕನ ಆದರ್ಶಗಳನ್ನು ಪಾಲಿಸಿದ್ದನು. ತ್ರಿಭುವನತಿಲಕ ಬಸದಿಯು ಆದಿನಾಥ ತೀರ್ಥಂಕರರ ಜಿನ ಚೈತ್ಯವಾಗಿತು. ಅನೇಕ ಜಿನಾಲಯ ಜಿನಬಿಂಬ ಜಿನಾಶಾಸನ ದೇವರ ಮೂರ್ತಿಗಳಿಂದ ವೃಷಭಗಿರಿ ತೀರ್ತ್ಥವು ದಕ್ಷಿಣ ವೃಷ್ಬಾದ್ರಿಯಾಗಿ ಲೋಕಸ್ತುತಿಗೆ ಪಾತ್ರವಾಗಿತ್ತು.

೩೨. ಶ್ರೀಪರ್ವತ ತೀರ್ತ್ಥ: ಆಂಧ್ರ ಪ್ರದೇಶದ ಕರ್ನೂಲು ಜಿಲ್ಲೆಗೆ ಸೇರಿದ, ಹಾಗೂ ತಿಂಗಭದ್ರಾ- ಕೃಷ್ಣಾನದಿಗಳ ಸಂಗಮಸ್ಥಾನದಲ್ಲಿ ಇರುವ ಶ್ರೀಪರ್ವತ ತೀರ್ತ್ಥವು ಪ್ರಸಿದ್ಧ್ ಜೈನತೀರ್ತ್ಥವೆಂದು ಸಮಯಪರೀಕ್ಷೆ ಕಾವ್ಯದಲ್ಲಿ ಬ್ರಹ್ಮಶಿವ ಕವಿ ಸ್ತುತಿಸಿದ್ದಾನೆ (೨-೫೨೪). ಈ ಕುರಿತುಆ ಸಿಗುವ ಇತರ ಪೋಷಕ ಸಾಮಗ್ರಿಯನ್ನು ಸಂಚಯಿಸಬೇಕು.

೩೩. ಸಿವಗಂಗೆಯ ತೀರ್ತ್ಥ: ಬೆಂಗಳೂರು ಜಿಲ್ಲೆಯ ನೆಲಮಂಗಲ ತಾಲ್ಲೂಕಿಗೆ ಸೇರಿದ ಸಿವಗಂಗೆ ಬೆಟ್ಟಕ್ಕೂ ಪಟ್ಟಮಹಿಷಿ ಶಾಂತಲಾದೇವಿಗೂ ಇರುವ ಬಾಂಧವ್ಯದ ಬೆಸುಗೆಯ ಸ್ವರೂಪ ಚಿಂತನೀಯವಾದುದು. ಗುರುಗಳ ಪ್ರಭಾಚಂದ್ರ ಸಿದ್ಧಾನ್ತದೇವರೆ ಪೆತ್ತತಾಯಿಗುಣನಿಧಿ ಮಾಚಿಕಬ್ಬೆ ಪಿರಿಯಪೆರ್ಗ್ಗಡೆ ಮಾರಸಿಂಗಯ್ಯ್ ತಂದೆ ಮಾವನುಂ ಪೆರ್ಗ್ಗಡೆ ಸಿಂಗಿಮಯ್ಯಂ ಅರಸಂ ವಿಷ್ಣುವರ್ಧ್ಧನನ್ರಿಪಂ ವಲ್ಲಭಂ ಜಿನನಾಥಂ ತನಗೆಂದುಮಿಷ್ಟದೆಯ್ವಂ ಅರಸಿ ಶಾನ್ತಲದೇವಿಯ ಮಹಿಮೆಯಂ ಬಣ್ಣಸಲು ಬಕ್ಕುಮೆ ಭೂತಳ್ದೊಳು ॥

ಸಕವರ್ಷ೦ ೧೦೫೧ ಮೂಱನೆಯ ವಿರೋಧಿ ಕ್ರಿತ್ಸಂವತ್ಸರದ ಚೈತ್ರಸುದ್ಧ ಪಂಚಮೀ ಸೋಮವಾರದಂದು ಸಿವಗಂಗೆಯ ತೀರ್ತ್ಥದಲು ಮುಡಿಸಿ ಸ್ವರ್ಗತೆಯಾದಳು [ಎ.ಕ. ೨, ೧೭೬ (೧೪೩) ೧೧೩೧.ಪು. ೧೩೧.ಸಾಲು : ೮೭. ಸಾಲು: ೮೭–೯೭]ಸಿವಗಂಗೆಯಲ್ಲಿ ಅದಳ ಜಿನಾಲಯಂಗಳು ಇದ್ದುದನ್ನು ಶಾಸನ ಶ್ರುತ ಪಡಿಸಿದೆ [ಎ.ಕ. ೯, ನೆಮಂ ೮೪.೧೧೪೧. ಸಿವಗಂಗೆ ]. ಅದಳವಂಶ ಶಿಖಾಮಣಿ ವಿಷ್ಣುವರ್ಧನು ಇದನ್ನು ಜೈನ ಕುರುಹುಳಾಗಲಿ ಇಲ್ಲ. ಆದರೆ ಕ್ರಿ.ಶ. ಹದಿಮೂರನೆಯ ಶತಮಾನದವರೆಗೆ ಅವೆಲ್ಲ ಇದ್ದುವೆಂಬುದಾಕ್ಕೆ ಶಾಸನಗಳು ದಾಖಲೆಯಾಗಿವೆ. ಎಲ್ಲೋರ, ಬಾದಾಮಿಗಳಲ್ಲಿ ಇರುವಂತೆ ಸಿವಗಂಗೆಯಲ್ಲೂ (ಶೈವ, ವೃಷ್ಣವ ) ಜೈನ ದೇವಾಲಯಗಳು ಇದ್ದಿರಬೇಕು. ನಂದಿ ಬೆಟ್ಟದಲ್ಲೂಇದೇ ರೀತಿಇದ್ದಿತು. ಬೆಟ್ಟದ ತುದಿಯಲ್ಲಿ ಜೈನ ಬಸದಿ ಇದ್ದಿತ್ತು. ಆದರೆ ಬೆಟ್ಟದ ಮೇಲಿನ ಅತ್ಯಂತ ಪ್ರಾಚೀನ ಬಸದಿ, ಗಂಗರ ಪಟ್ಟಜಿನಾಲಯ ಹಿಂದೂ ಗುಡಿಯಾಗಿ ಬಹಳ ಹಿಂದೆಯೇ ಸು. ೧೩.ಶ.ದಲ್ಲಿ ಪರಿವರ್ತನೆಯಾಗಿ, ಅದರ ವಾಸ್ತು–ಶಿಲಗಳಲ್ಲಿ ಮಾರ್ಪಾಟುಗಳಾದುವು.

ಶಾಂತಲಾದೇವಿಯು, ಹೊಯ್ಸಳಸಾಮ್ರಾಜ್ಯದ ಮುಖ್ಯವಾದ ರಾಜಧಾನಿಯಾದ ದ್ವಾರಸಮುದ್ರವನ್ನೂ ಶ್ರವಣ ಬೆಳುಗೊಳೆ ತೀರ್ಥದಲ್ಲಿ ಬಂದು ಸಲ್ಲೇಖನ ವ್ರತ ಸ್ವೀಕರಿಸಲು ಇದ್ದ ಐತಿಹಾಸಿಕ ಕಾರಣಗಳಾಗಲಿ, ಸಾಂಸಾರಿಕ ಒತ್ತಡಗಳಾಗಲಿ ಖಚಿತವಾಗಿ ತಿಳಿದುಬಂದಿಲ್ಲ. ಆದರೆ ಸಿವೆಗಂಗೆ ಮತ್ತು ಅದರ ಸುತ್ತಮುತ್ತ ಇದ್ದ ಜೈನಕ್ಷೇತ್ರಗಳ ಪ್ರಾಶಾಂತ ಪರಿಸರ ಹಿರಿಮೆಯನ್ನೂ ಮರೆಯುವಂತಿಲ್ಲ. ಕುಂದಾಚ್ಚಿಯು ಏಳನೆಯ ಶ. ದಲ್ಲಿ ಲೋಕತಿಲಕ ಜಿನಾಲಯ ಕಟ್ಟಿಸಿದ ಶ್ರೀಪುರ (ಶ್ರೀಗಿರಿಪುರ–ಸಿಡ್ಲಿಪುರ,) ಕೋಳಾಲ (ಕುವಲಪುರ , ಎಂಬುದು ಈ ಕೋಳಾಲವೇ ಹೊರೆತು ಕೋಲಾ ಅಲ್ಲ). ನಿರ್ಗುಂದ (ನಿಡುಗುಂದ)ಮಾಗಡಿ, ಕಲ್ಲೆಹ (ಕಲ್ಯ), ಹೊಸುರು (ಹೊಸಪಟ್ಟಣ), ಮಂಣೆ –ಇವೆಲ್ಲ ಜೈನ ಕೇಂದ್ರಗಳೂ ಸಮೀಪದಲ್ಲಿ ಇದ್ದುವು. ಶಾಂತಲೆಯೇ ಕಟ್ಟಿಸಿದ, ಘನತರ ಕೂಟ ಕೋಏಯುತ ಪಾರ್ಶ್ವಜಿನೇಶ್ವರ ಗೇಹೆವು ಜಗಜನನುತಮಾಗಿ

ಸಿಂದಘಟ್ಟ್ದಾಲ್ಲಿ (ಕೃಷ್ಣರಾಜ ಪೇಟೆ ತಾ ॥ ; ಮೇಲುಕೋಟೆ ಸಮೀಪ) ವಿರಾಜಮಾನವಾಗಿತ್ತು ; ಪತಿಯ ಹೆಸರಿನ ಅದಳ ಜಿನಾಲಯಗಳು ಸಿವೆಗಂಗೆಯಲ್ಲಿ ಬರುವ ಪೂರ್ವದಿಂದಲೂ ಜೈನ ಬಸದಿ ಇಲ್ಲಿ ಕೀರ್ತಿಶಾಲಿಯಾಗಿದ್ದಿರಭೇಕು. ಅದರಿಂದ ಆಕೆ ತನ್ನಮರಣದ ಮಹಾನವಮಿಗೆ ಈ ಸ್ಥಳವನ್ನು ಆಯ್ಕೆ ಮಾಡಿದಂತೆ ತಿಳಿಯ ಬಹುದು.

ಹೀಗೆಯೇ ಚಿಪ್ಪಗಿರಿತೀರ್ಥ್, ಪ (ಹ) ನಸೋಗೆಯ ತೀರ್ಥ್, ಕೊಲ್ಲಾಪುರ ತೀರ್ಥ್– ಮೊದಲಾದುವನ್ನು ಕುರಿತೂ ಶಾಸನಗಳಲ್ಲಿ ಉಲೇಖಗಳಿವೆ.